# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಸೋಮವಾರ, ಜೂನ್ 13, 2022

ಸಂಪುಟ : 49 ಸಂಚಿಕೆ : 30 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com




**ಸೂರ್ಯನೂ ಸುಂದರ ..** ಚಂದಿರನಷ್ಟೇ ಅಲ್ಲ, ಕೆಲವೊಮ್ಮೆ ಸೂರ್ಯನೂ ಸಹ ವಿಸ್ಮಯ ಮೂಡಿಸುವ ಮೂಲಕ ಜನತೆಯ ಗಮನ ಸೆಳೆಯುತ್ತಾನೆ. ಭಾನುವಾರ ದಾವಣಗೆರೆಯ ಲೇಬರ್ ಕಾಲೋನಿಯಲ್ಲಿ ಕಂಡು ಬಂದ ದೃಶ್ಯವಿದು. ಸೂರ್ಯನ ಸುತ್ತ ವೃತ್ತಾಕಾರದ ಕವಚ ನಿರ್ಮಾಣವಾದಂತಹ ದೃಶ್ಯವನ್ನು ಪತ್ರಿಕೆಯ ಓದುಗ ಅಯಾನ್ ಸೆರೆ ಹಿಡಿದಿದ್ದಾರೆ.

## ಪರಿಹಾರ, ವಶದ ನಂತರ ಜಾಗ ಸರ್ಕಾರದ್ದು

**ಜಾಗ ಖಾಲಿ ಇದೆ ಎಂದು ಯಾರೇ ಬಳಸಿದರೂ ಅದು ಒತ್ತುವರಿ : ಸುಪ್ರೀಂ**

ನವದೆಹಲಿ, ಜೂ. 12 – ಜಮೀನು ವಶ ಕಾಯ್ದೆಯಡಿ ಪರಿಹಾರ ಪಾವತಿಸಿದ ಹಾಗೂ ಜಮೀನನ್ನು ವಶಕ್ಕೆ ಪಡೆದುಕೊಂಡ ನಂತರ, ಆ ಜಾಗ ಸರ್ಕಾರದ್ದಾಗುತ್ತದೆ ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.

ನ್ಯಾಯಮೂರ್ತಿಗಳಾದ ಎಂ.ಆರ್. ಷಾ ಹಾಗೂ ಅನಿರುದ್ಧ ಬೋಸ್ ಅವರನ್ನು ಒಳಗೊಂಡ ಪೀಠ ಈ ನಿಲುವು ತಳೆದಿದೆ. ಇದಕ್ಕೂ ಮುಂಚೆ ಅಲಹಾಬಾದ್ ಹೈಕೋರ್ಟ್ ಇದೇ ವಿಷಯಕ್ಕೆ ಸಂಬಂಧಿಸಿದಂತೆ ತೀರ್ಪು ನೀಡಿ, ಜಮೀನು ವಶದ ನಂತರವೂ ಆ ಜಾಗ ಬಳಸಿಕೊಳ್ಳುವ ವ್ಯಕ್ತಿಯನ್ನು ನುಸುಳುಕೋರ ಎನ್ನಬಹುದು ಎಂದು ತಿಳಿಸಿತ್ತು. ಈ ತೀರ್ಪನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿದೆ.

ಗ್ರೇಟರ್ ನೋಯ್ಡಾ ಕೈಗಾರಿಕಾ ಪ್ರಾಧಿಕಾರವು ವ್ಯಕ್ತಿಯೊಬ್ಬರು ಅನಧಿಕೃತವಾಗಿ ಅಧಿಸೂಚಿತ ಪ್ರದೇಶ ಒತ್ತುವರಿ ಮಾಡಿಕೊಂಡಿರುವುದನ್ನು ತೆರವುಗೊಳಿಸುವಂತೆ ನೋಟಿಸ್ ಕಳಿಸಿತ್ತು.

ವ್ಯಕ್ತಿಯ ಈ ಜಾಗವನ್ನು ವಶಪಡಿಸಿಕೊಳ್ಳ ಲಾಗಿದೆ ಹಾಗೂ ಅದಕ್ಕೆ ಪರಿಹಾರವನ್ನೂ ಪಾವತಿಸಲಾಗಿದೆ. ಈ ಹಿನ್ನೆಲೆಯಲ್ಲಿ ವ್ಯಕ್ತಿಗೆ ಜಮೀನಿನ ಮೇಲೆ ಯಾವುದೇ ಹಕ್ಕಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಈ ಹಿನ್ನೆಲೆಯ ವಿಷಯದಲ್ಲಿ ಮಧ್ಯ ಪ್ರವೇಶಿಸಲು ಹೈಕೋರ್ಟ್ ನಿರಾಕರಿಸಿರುವುದು ಸರಿಯಾಗಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

1996ರಲ್ಲೇ ಜಮೀನು ವಶಪಡಿಸಿಕೊಳ್ಳಲಾಗಿತ್ತು. ನಂತರ ಈ ಜಮೀನಿನ ಸ್ವರೂಪವನ್ನು ಕಂದಾಯದಿಂದ ಬದಲಿಸಲಾಗಿತ್ತು. ಆದರೂ, ಅರ್ಜಿದಾರರು ಈ ಜಮೀನು ಒತ್ತುವರಿ ಮಾಡಿಕೊಂಡಿದ್ದಾರೆ ಎಂದು ನ್ಯಾಯಾಲಯ ಹೇಳಿದೆ.

ಹಾಗಾಗಿ ವಶಪಡಿಸಿಕೊಳ್ಳಲಾದ ಜಮೀನನ್ನು ಉಳಿಸಿಕೊಂಡವರನ್ನು ಒತ್ತುವರಿ ಮಾಡಿದವರು ಎಂದೇ ಪರಿಗಣಿಸಲಾಗುತ್ತದೆ. ದೊಡ್ಡ ಪ್ರಮಾಣದ ಜಮೀನಿದ್ದಾಗ ಸರ್ಕಾರ ಅಲ್ಲೆಲ್ಲ ರಕ್ಷಣೆಗೆ ವ್ಯಕ್ತಿಗಳು, ಇಲ್ಲವೇ ಪೊಲೀಸರನ್ನು ನೇಮಿಸಲಾ ಗದು. ಇಂತಹ ಸಂದರ್ಭದಲ್ಲಿ ಜಮೀನು ಬಳಸಿಲ್ಲ ಎಂದು ಬೇಸಾಯದಲ್ಲಿ ತೊಡಗುವಂತಿಲ್ಲ. ವಶಪಡಿಸಿಕೊಂಡ ಜಮೀನಿನಲ್ಲಿ ಸರ್ಕಾರ ಬಳಕೆ ಆರಂಭಿಸಬೇಕು. ಇಲ್ಲವೇ ಭೌತಿಕವಾಗಿ ಅಲ್ಲಿ ಉಪಸ್ಥಿತವಿರಬೇಕು ಎಂದೇನೂ ಇಲ್ಲ ಎಂದು ನ್ಯಾಯಾಲಯ ಹೇಳಿದೆ.

## ವಾಯುಪಡೆಯಿಂದ 114 ವಿಮಾನಗಳ ಖರೀದಿ

**ದೇಶದಲ್ಲೇ 96 ವಿಮಾನಗಳ ಉತ್ಪಾದನೆಯ ಉದ್ದೇಶ**

ನವದೆಹಲಿ, ಜೂ. 12 – ಭಾರತದಲ್ಲಿ ನಿರ್ಮಿಸಲಾಗುವ 96 ಸಮರ ವಿಮಾನಗಳೂ ಸೇರಿದಂತೆ ಒಟ್ಟು 114 ವಿಮಾನಗಳನ್ನು ಖರೀದಿಸಲು ವಾಯುಪಡೆ ಯೋಜಿಸಿದೆ. ಆತ್ಮನಿರ್ಭರ್ ಯೋಜನೆಯ ಅನ್ವಯ ಭಾರತ ದಲ್ಲಿ ವಿಮಾನಗಳನ್ನು ಉತ್ಪಾದಿಸಲು ಉದ್ದೇಶಸಲಾಗಿದೆ. 18 ವಿಮಾನಗಳನ್ನು ವಿದೇಶ ದಿಂದ ಆಮದು ಮಾಡಿಕೊಂಡರೆ, ಉಳಿದವುಗಳನ್ನು (2ನೇ ಪುಟಕ್ಕೆ)

## ಕಾಶ್ಮೀರ : ಕಾರ್ಯಾಚರಣೆ ಮೂವರು ಉಗ್ರರು ಹತ

ಶ್ರೀನಗರ, ಜೂ. 12 – ಜಮ್ಮು ಮತ್ತು ಕಾಶ್ಮೀರದ ಪುಲ್ವಾಮಾ ಜಿಲ್ಲೆಯಲ್ಲಿ ರಾತ್ರಿ ವೇಳೆ ನಡೆಸಿದ ಕಾರ್ಯಾಚರಣೆಯಲ್ಲಿ ಲಷ್ಕರ್ ಎ ತೊಯ್ಬಾದ ಮೂವರು ಉಗ್ರರು ಹತರಾಗಿದ್ದಾರೆ.

ಇದರೊಂದಿಗೆ ಈ (3ನೇ ಪುಟಕ್ಕೆ)

## ರಾಷ್ಟ್ರಪತಿ ಚುನಾವಣೆಗೆ ಮತ ಯಂತ್ರಗಳು ಸಜ್ಜಾಗಿಲ್ಲ

ನವದೆಹಲಿ, ಜೂ. 12 – 2004ರ ನಂತರ ನಾಲ್ಕು ಲೋಕಸಭಾ ಚುನಾವಣೆಗಳು ಹಾಗೂ 127 ವಿಧಾನಸಭಾ ಚುನಾವಣೆಗಳಿಗೆ ಮತ ಯಂತ್ರಗಳನ್ನು ಬಳಸಲಾಗಿದೆ. ಆದರೆ, ರಾಷ್ಟ್ರಪತಿ ಹಾಗೂ ಉಪ ರಾಷ್ಟ್ರಪತಿ ಚುನಾವಣೆಗೆ ಮಾತ್ರ ಮತ ಯಂತ್ರಗಳ ಬಳಕೆಯಾಗಿಲ್ಲ.

ಏಕೆಂದರೆ ಲೋಕಸಭೆ ಹಾಗೂ ರಾಜ್ಯ ವಿಧಾನಸಭೆಗಳಂತಹ ನೇರ ಚುನಾವಣೆಗಳಿಗಾಗಿ ಮಾತ್ರ ಮತ ಯಂತ್ರಗಳನ್ನು ರೂಪಿಸಲಾಗಿದೆ.

ಈ ಚುನಾವಣೆಗಳಲ್ಲಿ ಅತಿ ಹೆಚ್ಚು ಮತ ಗಳಿಸಿದವರು ಚುನಾಯಿತರಾಗುತ್ತಾರೆ. ಆದರೆ, ರಾಷ್ಟ್ರಪತಿ ಚುನಾವಣೆಯನ್ನು ಆದ್ಯತೆಯ ಮತಗಳ ಮೇಲೆ ನಿರ್ಧರಿಸಲಾಗುತ್ತದೆ. ಈ ಚುನಾವಣೆಗಳಲ್ಲಿ ಹೆಚ್ಚು ಅಭ್ಯರ್ಥಿಗಳಿದ್ದರೆ, ಮತದಾರರು ಆದ್ಯತೆಯ ಮೇಲೆ ಎಲ್ಲರಿಗೂ ಮತ ಚಲಾಯಿಸಬಹುದು.

1, 2, 3, 4, 5... ಹೀಗೆ ಸರಣಿಯಂತೆ ಆದ್ಯತೆಯ ಮೇಲೆ ಅಭ್ಯರ್ಥಿಗಳಿಗೆ ಮತ ಚಲಾಯಿಸಬಹುದು. ಇದಕ್ಕಾಗಿ ಮತ ಪತ್ರಗಳಲ್ಲಿ ಕಾಲಂಗಳನ್ನು ರೂಪಿಸಲಾಗಿರುತ್ತದೆ. ಆದರೆ, ಮತ ಯಂತ್ರಗಳಲ್ಲಿ ಈ ರೀತಿಯ ವ್ಯವಸ್ಥೆ ಇಲ್ಲ. ಮತಯಂತ್ರಗಳಲ್ಲಿ ಒಬ್ಬ ಅಭ್ಯರ್ಥಿಗೆ ಮಾತ್ರ ಮತ ಚಲಾಯಿಸಲು ಸಾಧ್ಯವಾಗುತ್ತದೆ.

ಮತ ಯಂತ್ರದ ಮಾದರಿಯನ್ನು 1979ರಲ್ಲಿ ರೂಪಿಸಲಾಗಿತ್ತು. ಭಾರತ್ ಎಲೆಕ್ಟ್ರಾನಿಕ್ ಕಂಪನಿಯು 1980ರ ಆಗಸ್ಟ್ 6ರಂದು (3ನೇ ಪುಟಕ್ಕೆ)

## ರೋಗ ಬರುವುದಕ್ಕಿಂತ ಮೊದಲೇ ಗಮನ ಹರಿಸಿ

**ಹರಪನಹಳ್ಳಿ: ಆರೋಗ್ಯ ಶಿಬಿರದಲ್ಲಿ ಶ್ರೀ ವರಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ ಅಭಿಮತ**



ಹರಪನಹಳ್ಳಿ, ಜೂ.12- ಯಾಂತ್ರೀಕೃತ ಜೀವನದಲ್ಲಿ ಮನುಷ್ಯ ಸದಾ ಒತ್ತಡದಲ್ಲಿದ್ದು, ರೋಗ ಬರುವುದಕ್ಕಿಂತ ಮೊದಲೇ ಆರೋಗ್ಯದ ಕಡೆ ಗಮನ ಹರಿಸಬೇಕು ಎಂದು ಶ್ರೀ ವರಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಪಟ್ಟಣದ ತೆಗ್ಗಿನಮಠದ ಶ್ರೀ ಚಂದ್ರಶೇಖರ ಸ್ವಾಮೀಜಿ ಧರ್ಮ ಭವನದಲ್ಲಿ ಭಾನುವಾರ ನ್ಯಾಚುರಲ್ ಹೆಲ್ತ್ ಕ್ಯಾಂಪ್, ಡಾ. ರಾಮಮನೋಹರ ಲೋಹಿಯಾ ಆರೋಗ್ಯ ಜೀವನ್ ಸಂಸ್ಥಾನ ಹಾಗೂ ತೆಗ್ಗಿನಮಠದ ಎಸ್‌ಸಿಎಸ್ ಔಷಧ ಮಹಾವಿದ್ಯಾಲಯ ಫಾರ್ಮಸಿ ಪ್ರಾಕ್ಟೀಸ್ ಅವರ ಆಶ್ರಯದಲ್ಲಿ ಅಕ್ಯುಪ್ರೆಷರ್, ಮ್ಯಾಗ್ನೆಟಿಕ್ ಮತ್ತು ವೈಬ್ರೇಷನ್ ಚಿಕಿತ್ಸಾ ಶಿಬಿರದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ರೋಗಗಳಿಗೆ ಥೆರಪಿ ಹೇಳಿ ಮಾಡಿಸಿದ ಚಿಕಿತ್ಸೆಯಾಗಿದೆ. ಒಳ ಗಾಯ ಗಳಾದಾಗ ನರಗಳಿಗೆ ತೊಂದರೆಯಾದಾಗ ಥೆರಪಿ ಚಿಕಿತ್ಸೆ ತುಂಬಾ ಉಪಕಾರಿಯಾಗಿದೆ. ಇಂಗ್ಲಿಷ್ ಮೆಡಿಸಿನ್ ಬಂದು 200 ವರ್ಷಗಳಾ ಗಿದ್ದು, ರಕ್ತದ ಒತ್ತಡ, ಮನಸ್ಸಿಗೆ ನೆಮ್ಮದಿ ತಂದುಕೊಳ್ಳಬಹುದಾಗಿದ್ದು, ಈ ಶಿಬಿರವು ಇಂದಿನಿಂದ ಐದು ದಿನಗಳ ಕಾಲ ನಡೆಯಲಿದ್ದು, ಪ್ರತಿದಿನ ಚಿಕಿತ್ಸೆ ತೆಗೆದುಕೊಳ್ಳಬಹುದು. 60 ವರ್ಷದವರು ಸಹ ಇದರ ಸದುಪಯೋಗ ಪಡೆದುಕೊಳ್ಳಬಹುದು ಎಂದರು.

ಡಾ. ರಾಕೇಶ್ ಮಾತನಾಡಿ, ದೈಹಿಕ ತೊಂದರೆ ಬರುವುದಕ್ಕಿಂತ ಮುಂಚೆ ಪ್ರಾರಂಭದ ಮೊದಲು ಅಕ್ಯುಪ್ರೆಷರ್ ನ್ಯೂರೋಥೆರಪಿ ಮಾಡಿಕೊಂಡರೆ ಆರೋಗ್ಯ ಸುಧಾರಣೆ ಆಗುತ್ತದೆ ಎಂದರು. ಜೀವನದಲ್ಲಿ ಇದನ್ನು ಅಳವಡಿಸಿಕೊಳ್ಳಬೇಕು ಎಂದರು.

ತೆಗ್ಗಿನಮಠದ ಆಡಳಿತಾಧಿಕಾರಿ ಟಿ.ಎಂ.ಚಂದ್ರಶೇಖರ್ ಮಾತನಾಡಿ, ಶ್ರೀಮಠದಲ್ಲಿ ಸಾಮಾಜಿಕ ಕಳಕಳಿಯ ಕಾರ್ಯಕ್ರಮಗಳನ್ನು ವರ್ಷದಲ್ಲಿ 3 ಬಾರಿ ಮಾಡಲಾಗುತ್ತದೆ. ಆರೋಗ್ಯ ಸುಧಾರಣೆಗಾಗಿ ಋಷಿ ಮುನಿಗಳ ಕಾಲದಿಂದಲೂ ಆರೋಗ್ಯದತ್ತ ಗಮನ ನೀಡಲಾಗಿದೆ. ರೋಗ ಬರುವುದಕ್ಕಿಂತ ಮುಂಚೆ ಆರೋಗ್ಯವಂತರಾಗಿರಿ, ದೇಹದ ಅಂಗಗಳು ಚೆನ್ನಾಗಿ ಇರಬೇಕು ಎಂದರೆ ಯೋಗ, ಪ್ರಾಣಾಯಾಮ ಮಾಡಿದರೆ (3ನೇ ಪುಟಕ್ಕೆ)

## 17 ರಂದು ಸಿ.ಎಂ ಮನೆ ಎದುರು ಪಂಚಮಸಾಲಿ ಶ್ರೀಗಳ ಧರಣಿ



ರಾಣೇಬೆನ್ನೂರು, ಜೂ.12- ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ಕೊಡುವಂತೆ ತೀವ್ರ ಹೋರಾಟ ನಡೆಸುತ್ತಿರುವ ಕೂಡಲ ಸಂಗಮ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ಜಯಮೃತ್ಯುಂಜಯ ಸ್ವಾಮಿಗಳು ಮುಖ್ಯಮಂತ್ರಿಗಳ ನಿವಾಸದ ಎದುರು ಒಂದು ದಿನದ ಧರಣಿ ನಡೆಸಲು ತೀರ್ಮಾನಿಸಿದ್ದು, ಶ್ರೀ ಗಳು ಸಮಾಜದ ಜನರ ಸಂಘಟನೆಗೆ ತಾಲ್ಲೂಕಿನಲ್ಲಿ ಎರಡು ದಿನಗಳ ಪ್ರವಾಸ ಕೈಗೊಂಡಿದ್ದಾರೆ.

ನಾಡಿದ್ದು ದಿನಾಂಕ 14 ರಂದು ತುಮ್ಮಿನಕಟ್ಟೆ ಜಿ.ಪಂ. ವ್ಯಾಪ್ತಿಯ ತುಮ್ಮಿನಕಟ್ಟೆಯಲ್ಲಿ, ನಂತರ ಕರೂರು ಜಿ.ಪಂ.ನ ನದಿಹರಳಹಳ್ಳಿಯಲ್ಲಿ, ನಂತರ ಹಲಗೇರಿ ಜಿ.ಪಂ.ನ ಇಟಗಿ ಗ್ರಾಮದಲ್ಲಿ ಸಮಾಜದ ಬಂಧುಗಳಿಗೆ ಧರಣಿ ಕಾರ್ಯಕ್ರಮದ ಬಗ್ಗೆ ವಿವರಿಸಿ, ಸಂಜೆ 7 ಗಂಟೆಗೆ ನಗರದ ದೊಡ್ಡಪೇಟೆ ಶ್ರೀ ಬಸವೇಶ್ವರ ದೇವಸ್ಥಾನದ ಸಭೆಯಲ್ಲಿ ಭಾಗವಹಿಸುವರು.

ದಿನಾಂಕ 15 ರಂದು ಕಾಕೋಳ ಜಿ.ಪಂ. ವ್ಯಾಪ್ತಿಯ ಗುಡಿಹೊನ್ನತ್ತಿ, ಕಾಕೋಳದಲ್ಲಿ, ಜೋಯಿಸರಹರಳಹಳ್ಳಿ ಜಿ.ಪಂ. ವ್ಯಾಪ್ತಿಯ ಉಕ್ಕುಂದದಲ್ಲಿ ನಂತರ ಮೆಡ್ಲೇರಿ ಜಿ.ಪಂ.ನ ಬೇಲೂರು ಗ್ರಾಮದಲ್ಲಿ ಸಭೆ ನಡೆಸಿ, ಸಮಾಜದ (3ನೇ ಪುಟಕ್ಕೆ)

## ಎಸ್ಸೆಸ್ ಕಪ್ ಕ್ರಿಕೆಟ್ ಬಹುಮಾನ ವಿತರಣೆ



ದಾವಣಗೆರೆ, ಜೂ.12- ದಾವಣಗೆರೆ ಇಲೆವೆನ್ಸ್ ಕ್ರಿಕೆಟ್ ಕ್ಲಬ್ ಹಾಗೂ ಜಿಲ್ಲಾ ಕ್ರೀಡಾಪಟುಗಳ ಸಾಂಸ್ಕೃತಿಕ ಸಂಘ ಇವರ ಜಂಟಿ ಆಶ್ರಯದಲ್ಲಿ ಹಿರಿಯ ಶಾಸಕ ಡಾ.ಶಾಮನೂರು ಶಿವಶಂಕರಪ್ಪ ಅವರ 92ನೇ ಜನ್ಮದಿನದ ಅಂಗವಾಗಿ 20ನೇ ಬಾರಿಗೆ ಅಫಿಷಿಯಲ್ ಮತ್ತು ಎಸ್ಸೆಸ್ ಕಪ್ ಕ್ರಿಕೆಟ್ ಪಂದ್ಯಾವಳಿಯನ್ನು ಅದ್ಧೂರಿಯಾಗಿ ನಡೆಸಲಾಯಿತು.

ಇಂದು ನಡೆದ ಪಂದ್ಯಾವಳಿಯ ಬಹುಮಾನ ವಿತರಣೆ ಸಮಾರಂಭದಲ್ಲಿ ಜಿಲ್ಲಾ ಕ್ರೀಡಾಪಟುಗಳ ಸಂಘದ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ, ಉಪಾಧ್ಯಕ್ಷ ಶಿವಗಂಗಾ ಶ್ರೀನಿವಾಸ್, ಪಂದ್ಯಾವಳಿಯ ವ್ಯವಸ್ಥಾಪಕ ಜಯಪ್ರಕಾಶ್ ಅವರು ಬಹುಮಾನ ವಿತರಣೆ ಮಾಡಿದರು.

ಪಂದ್ಯಾವಳಿಯಲ್ಲಿ ಅಫಿಷಿಯಲ್ ಕಪ್‌ನಲ್ಲಿ ಮರ್ಚಂಟ್ಸ್ ತಂಡ ಪ್ರಥಮ ಸ್ಥಾನವನ್ನು, ಬೆಸ್ಕಾಂ ತಂಡ ದ್ವಿತೀಯ ಸ್ಥಾನವನ್ನು ಪಡೆದಿದೆ. ಅದೇ ರೀತಿ ಎಸ್ಸೆಸ್ ಕಪ್ ಪಂದ್ಯಾವಳಿಯಲ್ಲಿ ಹೀರೋ ತಂಡ ಪ್ರಥಮ ಸ್ಥಾನವನ್ನು ಅಪ್ಪು ರಾಜ್ ತಂಡ ದ್ವಿತೀಯ ಸ್ಥಾನವನ್ನು ಪಡೆದಿವೆ.

## ಸೋಂಕು ಏರಿಳಿತ ಸಾಮಾನ್ಯ

**ಅಲೆಗಳ ಎಣಿಕೆ ನಿಲ್ಲಿಸುವುದು ಉತ್ತಮ: ಪರಿಣಿತರು**

ನವದೆಹಲಿ, ಜೂ. 12 – ಕೊರೊನಾ ಪ್ರಕರಣಗಳು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿರುವು ದು ಹೊಸ ಅಲೆಯ ಸೂಚಕವಲ್ಲ. ಕೊರೊನಾ ಅವಧಿಯಲ್ಲಿ ಈ ರೀತಿಯ ಏರುಪೇರುಗಳಾಗುತ್ತವೆ ಎಂದು ತಜ್ಞ ಪರಿಣಿತರು ಹೇಳಿದ್ದಾರೆ.

ಪ್ರಯಾಣ, ಸಾಮಾಜಿಕ ಕೂಟಗಳು ಹಾಗೂ ಆರ್ಥಿಕ ಚಟುವಟಿಕೆಗಳು ಹೆಚ್ಚಾಗಿರುವ ಕಾರಣದಿಂದಾಗಿ ವೈರಸ್ ಹರಡುವುದು ಹೆಚ್ಚಾಗಿದೆ ಎಂದು ಪರಿಣಿತರು ಅಭಿಪ್ರಾಯ ಪಟ್ಟಿದ್ದಾರೆ.


ಕೊರೊನಾ ವೈರಸ್ ವೇಗವಾಗಿ ಭುಗಿಲೆದ್ದಿಲ್ಲ. ನಿಧಾನವಾಗಿ ಹರಡುವಿಕೆ ಹೆಚ್ಚಾಗುತ್ತಿದೆ. ಹರಡುವಿಕೆ ಎಲ್ಲೆಡೆ ಒಂದೇ ರೀತಿಯಲ್ಲಿ ಇಲ್ಲ ಎಂದು ಹೆಸರಾಂತ ವೈರಾಣು ತಜ್ಞ ಟಿ. ಜೆಕೊಬ್ ಹೇಳಿದ್ದಾರೆ.

ಕೆಲ ರಾಜ್ಯಗಳಲ್ಲಿ ಸೋಂಕು ಹೆಚ್ಚಾಗಿದೆ. ಉಳಿದ ರಾಜ್ಯಗಳಲ್ಲಿ ಸೋಂಕು ಹೆಚ್ಚಾಗುತ್ತಿಲ್ಲ. ಹೀಗಾಗಿ ಕೊರೊನಾದ ಹೊಸ ಅಲೆ ಆರಂಭವಾಗುವ ಸೂಚನೆಗಳು ದೊರೆಯುತ್ತಿಲ್ಲ ಎಂದವರು ತಿಳಿಸಿದ್ದಾರೆ. ಅಲೆಗಳು ಬಂದಾಗ ನಿರಂತರವಾಗಿ ಹಿಂದಿನ ದಿನಗಳಿಗಿಂತ ಹೆಚ್ಚಿನ ಪ್ರಕರಣಗಳು ಕಂಡು ಬರಬೇಕು. ಈಗ ಆ ಪರಿಸ್ಥಿತಿ ಕಂಡು ಬರುತ್ತಿಲ್ಲ ಎಂದವರು ತಿಳಿಸಿದ್ದಾರೆ.

ಮಾಸ್ಕ್ ಧರಿಸದೇ ಇರುವುದು ಹಾಗೂ ಬೂಸ್ಟರ್ ಪಡೆಯದೇ ಇರುವುದೇ ಸೋಂಕು ಹೆಚ್ಚಾಗಲು ಪ್ರಮುಖ ಕಾರಣ ಎಂದು ಜೆಕೊಬ್ ಹೇಳಿದ್ದಾರೆ.

ಸ್ಥಳೀಯವಾಗಿ ಕಂಡು ಬರುತ್ತಿರುವ ಕೊರೊನಾ ಸೋಂಕುಗಳನ್ನು ಅಲೆ ಎಂದು ಪರಿಗಣಿಸಲಾಗದು ಎಂದು ಇನ್ಸೋರ್ವ ಸೋಂಕು ರೋಗ ಪರಿಣಿತ ಡಾ. ಚಂದ್ರಕಾಂತ್ ಲಹರಿಯ ಹೇಳಿದ್ದಾರೆ.

ಕೊರೊನಾ ಸೋಂಕು ಇನ್ನಷ್ಟು ದಿನ ಮುಂದುವರೆಯಲಿದೆ. ಅದೇ ರೀತಿ, ಕೊರೊನಾ ಸೋಂಕಿತರ ಏರಿಳಿತ ಮುಂದುವರೆಯಲಿದೆ ಎಂದು (3ನೇ ಪುಟಕ್ಕೆ)



## ಜಿಲ್ಲೆಯಲ್ಲಿ 2 ಪಾಸಿಟಿವ್

ದಾವಣಗೆರೆ, ಜೂ.12- ಜಿಲ್ಲೆಯಲ್ಲಿ ಭಾನುವಾರ ಇಬ್ಬರಲ್ಲಿ ಕೊರೊನಾ ಸೋಂಕು ಪತ್ತೆಯಾಗಿದೆ. ಈ ಮೂಲಕ ಹಲವು ದಿನಗಳಿಂದ ಸೋಂಕು ಮುಕ್ತವಾಗಿದ್ದ ಜಿಲ್ಲೆಯಲ್ಲಿ ಮತ್ತೆ ಆತಂಕ ಶುರುವಾಗಿದೆ. ದಾವಣಗೆರೆ ನಗರದ ಒಬ್ಬರು ಹಾಗೂ ಹೊರ ಜಿಲ್ಲೆಯ ಒಬ್ಬರಲ್ಲಿ ಸೋಂಕು ಪತ್ತೆಯಾಗಿದೆ. ಇಲ್ಲಿಯವರೆಗೆ ಜಿಲ್ಲೆಯಲ್ಲಿ 57546 ಜನರಲ್ಲಿ ಸೋಂಕು ಪತ್ತೆಯಾಗಿತ್ತು. 623 ಜನರು ಕೋವಿಡ್‌ನಿಂದಾಗಿ ಮೃತಪಟ್ಟಿದ್ದರು. ಇಂದು ರಾಜ್ಯದಲ್ಲಿ 463 ಜನರಲ್ಲಿ ಸೋಂಕು ಪತ್ತೆಯಾಗಿದ್ದು, ಬೆಂಗಳೂರು ನಗರದಲ್ಲಿಯೇ 429 ಜನರಲ್ಲಿ ಸೋಂಕು ಕಾಣಿಸಿಕೊಂಡಿದೆ.


**ರಾಜನಹಳ್ಳಿ ಎಸ್.ನಾಗರಾಜ ಶೆಟ್ಟಿ ನಿಧನ**



ದಾವಣಗೆರೆ ಪಿಜೆ ಬಡಾವಣೆ, ಎ.ವಿ.ಕೆ.ಕಾಲೇಜು ರಸ್ತೆ, ಐಸ್ ಲ್ಯಾಂಡ್ ಹಿಂಭಾಗದ ವಾಸಿ, ಬೆಳ್ಳೂಡಿ ಗಲ್ಲಿ ಶಿವರಾಂ ಟ್ರೇಡರ್ಸ್ ಮಾಲೀಕರಾದ

**ಶ್ರೀ ಆರ್.ಎಸ್.ನಾಗರಾಜಶೆಟ್ಟಿ** (86)

ಅವರು ದಿನಾಂಕ : 12-06-22ರ ಭಾನುವಾರ ಮಧ್ಯಾಹ್ನ 3-30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರು ಓರ್ವ ಪುತ್ರ, ಓರ್ವ ಪುತ್ರಿ, ಅಳಿಯ, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ದಿ : 13-06-22ರ ಸೋಮವಾರ ಮಧ್ಯಾಹ್ನ 2 ಗಂಟೆಗೆ ನಗರದ ಪಿ.ಬಿ. ರಸ್ತೆಯಲ್ಲಿರುವ ವೈಕುಂಠಧಾಮದಲ್ಲಿ ನಡೆಯಲಿದೆ.

–ದು:ಖತಪ್ತ ಕುಟುಂಬ ವರ್ಗ, 9242233680, 9242298856

**ದ್ವಿತೀಯ ವರ್ಷದ ಪುಣ್ಯಸ್ಮರಣೆ**



**ಶೋಭಾಗ್ ಚಂದ್ .ಹೆಚ್. ಜೈನ್**

ಮರಣ : 12.06.2020

ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷಗಳಾದವು
ಸದಾ ನಿಮ್ಮ ಸ್ಮರಣೆಯಲ್ಲಿರುವ

**ಜೈನ್ ಪ್ಲೈವುಡ್**

ಪಿ.ಬಿ. ರೋಡ್, ದಾವಣಗೆರೆ. ಹಾಗೂ
ಸಿಬ್ಬಂದಿ ವರ್ಗ, ಬಂಧುಗಳು ಮತ್ತು ಮಿತ್ರರು.

**ವರ್ತಕರಾದ ಶ್ರೀ ಎಂ.ಜಿ. ರಾಜಣ್ಣ ಅವರ ಧರ್ಮಪತ್ನಿ**

**ಎಂ ಆರ್. ಜಯಕೊಟ್ರಮ್ಮ ನಿಧನ**



ದಾವಣಗೆರೆಯ ಚಾಮರಾಜಪೇಟೆ ಹಾಸಬಾವಿ ಸರ್ಕಲ್ ನಿವಾಸಿ

**ಶ್ರೀ ಎಂ.ಜಿ. ರಾಜಣ್ಣ** ಇವರ ಧರ್ಮಪತ್ನಿ

**ಶ್ರೀಮತಿ ಎಂ ಆರ್. ಜಯಕೊಟ್ರಮ್ಮ**

ಇವರು ದಿನಾಂಕ 12.6.2022ರ ಭಾನುವಾರ ಸಂಜೆ 6.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 64 ವರ್ಷ ವಯಸ್ಸಾಗಿತ್ತು. ಐವರು ಪುತ್ರಿಯರು, ಓರ್ವ ಪುತ್ರ, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 13.6.2022ರ ಸೋಮವಾರ ಬೆಳಿಗ್ಗೆ 12 ಗಂಟೆಗೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ - ಮಾಡಾಳ್ ವಂಶಸ್ಥರು**

**ಉಮಾ ಟ್ರೇಡರ್ಸ್**, ದಾವಣಗೆರೆ, ಚಿತ್ರದುರ್ಗ.

**ಉಮಾ ಟ್ರೇಡಿಂಗ್ ಕಂಪನಿ,**

**ಉಮಾ ಮಹೇಶ್ವರ ಇಂಡಸ್ಟ್ರೀಸ್**, ಹರಿಹರ ರಸ್ತೆ, ದಾವಣಗೆರೆ.

**ಮೊ : 98441 90877, 98448 65986**

## ತಾಯಿ ಜನ್ಮದಿನಕ್ಕೆ ಶುಭಾಶಯ ಹೇಳಲು ಮೊಬೈಲ್ ನೀಡಲಿಲ್ಲ ಎಂದು ಆತ್ಮಹತ್ಯೆ

ಉಳ್ಳಾಲ, ಜೂ. 11 - ತಾಯಿಯ ಹುಟ್ಟುಹಬ್ಬದಂದು ಶುಭಾಶಯ ತಿಳಿಸಲು ಹಾಸ್ಟೆಲ್ ವಾರ್ಡನ್ ಮೊಬೈಲ್ ನೀಡದಿದ್ದರಿಂದ ಮನನೊಂದ ವಿದ್ಯಾರ್ಥಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಪ್ರಕರಣ ಉಳ್ಳಾಲ ಪೊಲೀಸ್ ಠಾಣೆ ವ್ಯಾಪ್ತಿಯ ಕಿನ್ಯಾ ಶಾರದಾ ವಿದ್ಯಾನಿಕೇತನದಲ್ಲಿ ನಡೆದಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ಮೂಲದ 14 ವರ್ಷದ ಬಾಲಕ ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿ. ಶನಿವಾರ ಬಾಲಕನ ತಾಯಿ ಹುಟ್ಟಿದ ದಿನವಾಗಿತ್ತು. ಮನೆಯವರ ಜೊತೆ ಮಾತನಾಡಲು ಮೊಬೈಲ್ ಕೇಳಿದಾಗ ಶಾಲಾ ಆಡಳಿತ ಮಂಡಳಿಯ ನಿಯಮದಂತೆ ಹಾಸ್ಟೆಲ್ ವಾರ್ಡನ್ ತಿರಸ್ಕರಿಸಿದ್ದರು ಎನ್ನಲಾಗಿದೆ.

ಮನೆ ಮಂದಿಯೂ ಕೂಡ ವಿದ್ಯಾರ್ಥಿಯನ್ನು ಸಂಪರ್ಕಿಸಲು ಸುಮಾರು ಸಲ ಕರೆ ಮಾಡಿದ್ದರೂ ವಾರ್ಡನ್ ಮಾತನಾಡಲು ಬಿಟ್ಟಿರಲಿಲ್ಲ. ರಾತ್ರಿ 12 ಗಂಟೆಯವರೆಗೂ ಮಂಕಾಗಿ ಕುಳಿತಿದ್ದ ಬಾಲಕ ಹಾಸ್ಟೆಲ್ ಕೋಣೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಪೋಷಕರು ಆರೋಪಿಸಿದ್ದಾರೆ.

ಭಾನುವಾರ ಬೆಳಗ್ಗೆ ಘಟನೆ ಬೆಳಕಿಗೆ ಬಂದಾಗ ಇತರೆ ವಿದ್ಯಾರ್ಥಿಗಳು ಹಾಸ್ಟೆಲ್ ಪ್ರಮುಖರ ಗಮನಕ್ಕೆ ತಂದಿದ್ದರು. ಉಳ್ಳಾಲ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

## ಯೋಗ ದೈನಂದಿನ ಜೀವನದ ಭಾಗವಾಗಲಿ : ಮೋದಿ

ನವದೆಹಲಿ, ಜೂ. 12 – ಯೋಗದಿಂದ ಅಸಂಖ್ಯ ಲಾಭವಿರುವುದರಿಂದ, ಯೋಗ ದೈನಂದಿನ ಜೀವನದ ಭಾಗವಾಗಬೇಕು ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಕರೆ ನೀಡಿದ್ದಾರೆ. ಜೂನ್ 21ರಂದು ಅಂತರರಾಷ್ಟ್ರೀಯ ಯೋಗ ದಿನಾಚರಣೆ ನಡೆಯಲಿದೆ. ಜನರು ಈ ಕಾರ್ಯಕ್ರಮದಲ್ಲಿ ಭಾಗಿಯಾಗಬೇಕು ಎಂದೂ ಪ್ರಧಾನಿ ಹೇಳಿದ್ದಾರೆ.

# ರೈತ ಸಂಘಟನೆಗಳು ರೈತರ ಬದುಕನ್ನು ಹಸನಾಗಿಸುವ ಮುಖ್ಯ ಉದ್ದೇಶ ಹೊಂದಲಿ

### ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷರಾದ ಪವಿತ್ರ ರಾಮಯ್ಯ ಆಶಯ


ಹೊನ್ನಾಳಿ

ಹೊನ್ನಾಳಿ, ಜೂ. 11- ರೈತ ಸಂಘಟನೆಗಳು ಬಲಗೊಳ್ಳಬೇಕಾದರೆ ಯುವ ರೈತಾಪಿಗಳನ್ನು ಹೆಚ್ಚು ಆಕರ್ಷಿಸುವಲ್ಲಿ ರೈತ ಸಂಘಟನೆಗಳು ಮುಂದಾಗಬೇಕು ಎಂದು ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ (ಕಾಡಾ) ಅಧ್ಯಕ್ಷರಾದ ಪವಿತ್ರ ರಾಮಯ್ಯ ಕರೆ ನೀಡಿದರು.

ಇಲ್ಲಿನ ಹಿರೇಕಲ್ಮಠದಲ್ಲಿ ಹೊನ್ನಾಳಿ ಮತ್ತು ನ್ಯಾಮತಿ ಅವಳಿ ತಾಲ್ಲೂಕಿನ ಅಖಂಡ ಕರ್ನಾಟಕ ರೈತ ಸಂಘ, ಕರ್ನಾಟಕ ರಾಜ್ಯ ರೈತ ಸಂಘಗಳ ಸಹಯೋಗದಲ್ಲಿ ರೈತ ಸಂಘದ ಸಂಸ್ಥಾಪಕ ಅಧ್ಯಕ್ಷ ಹೆಚ್.ಎಸ್. ರುದ್ರಪ್ಪ, ಎಸ್.ಡಿ.ಸುಂದರೇಶ್, ಪ್ರೊ. ನಂಜುಂಡಸ್ವಾಮಿ, ಕೆ.ಎಸ್.ಪುಟ್ಟಣ್ಣಯ್ಯ, ಬಾಬುಗೌಡ ಪಾಟೀಲ್, ಕೃಷಿಕ ಸಮಾಜದ ಮಾಜಿ ಅಧ್ಯಕ್ಷ ಕುಂದೂರು ಹನುಮಂತಪ್ಪ ಇವರ ಸ್ಮರಣೋತ್ಸವ ಹಾಗೂ ರೈತ ಹುತಾತ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ರೈತ ಸಂಘಟನೆ ಹೆಸರಿನಲ್ಲಿ ಭ್ರಷ್ಟಾಚಾರ ನಡೆಸುವವರಿಗೆ ಕಡಿವಾಣ ಹಾಕಬೇಕಿದೆ. ರಾಜಕೀಯ ಹೊರತುಪಡಿಸಿ, ರೈತರ ಬದುಕನ್ನು ಹಸನಾಗಿಸಲು ಮುಖ್ಯ ಉದ್ದೇಶ ಹೊಂದಿ ರೈತ ಸಂಘಟನೆಗಳು ಬಲಗೊಳ್ಳುವುದು ಅತಿ ಅವಶ್ಯವಾಗಿದೆ. ರೈತ ಸಂಘಟನೆಗೆ ದುಡಿದ ಹುತಾತ್ಮರ ದಿನಾಚರಣೆ ಆಚರಿಸುವ ಮೂಲಕ ರೈತ ಸಂಘಟನೆಗೆ ಶಕ್ತಿ ಹಾಗೂ ಬಲ ತರಬೇಕಿದೆ ಎಂದರು.

ರೈತ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಮಂಡ್ಯ ಕೆ.ಸುಧೀರ್‌ಕುಮಾರ್ ಮಾತನಾಡಿ, ಸರ್ಕಾರಗಳು ಮತ್ತು ತಾಲ್ಲೂಕು ಆಡಳಿತವು ರೈತರಿಗೆ ಕೂಡಲೇ ಬಗರ್ ಹುಕ್ಕುಂ ಚೀಟಿ ನೀಡಬೇಕಿದೆ, ರೈತ ತನ್ನ ಬೆಳೆಯ ಬೆಲೆಯನ್ನು ತಾನೇ ನಿರ್ಧರಿಸುವ ಅವಕಾಶ ದೊರೆಯಬೇಕಿದೆ. ಅತೀ ಹೆಚ್ಚು ಹೈನುಗಾರಿಕೆಗೆ ಮುಂದಾಗಿರುವ ರೈತರನ್ನು ಪ್ರೋತ್ಸಾಹಿಸಲು ಹಾಲಿನ ದರ ಹೆಚ್ಚಿಸಬೇಕಿದೆ ಎಂದರು.

ತಾಲ್ಲೂಕು ಅಧ್ಯಕ್ಷ ಅರಬಗಟ್ಟೆ ಕೆ.ಸಿ.ಬಸಪ್ಪ ಸಕಾಲದಲ್ಲಿ ರೈತರಿಗೆ ಬೆಳೆ ವಿಮೆ ನೀಡುವುದರ ಜೊತೆಗೆ ರೈತರಿಗೆ ಅನುಕೂಲವಾಗುವಂತೆ 'ನಮ್ಮ ಹೊಲ ನಮ್ಮ ದಾರಿ'ಗಳ ಬಗ್ಗೆ ತ್ವರಿತವಾಗಿ ಕ್ರಮ ಕೈಗೊಳ್ಳಬೇಕಿದೆ ಎಂದರು.

ಡಾ.ಒಡೆಯರ ಚನ್ನಮಲ್ಲಿಕಾರ್ಜನ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಿದ್ದರು, ರೈತ ಸಂಘದ ತಾಲೂಕು ಅಧ್ಯಕ್ಷ ಅರಬಗಟ್ಟೆ ಕೆ.ಸಿ.ಬಸಪ್ಪ ಅಧ್ಯಕ್ಷತೆ ವಹಿಸಿದ್ದರು.

ರಾಜ್ಯ ರೈತ ಸಂಘದ ಉಪಾಧ್ಯಕ್ಷ ದೊಡ್ಡೇರೆಹಳ್ಳಿ ನಾಗರಾಜಪ್ಪ, ತಾಲ್ಲೂಕು ಗೌರವಾಧ್ಯಕ್ಷ ಹಿರೇಮಠ ಬಸವರಾಜಪ್ಪ, ರಾಜ್ಯ ಕಾರ್ಯದರ್ಶಿ ಎನ್. ಬಿ.ಮುರುಗೇಂದ್ರಯ್ಯ, ಜಿಲ್ಲಾಧ್ಯಕ್ಷ ಅಂಜನಪ್ಪ ಪೂಜಾರ್, ಸುಂಕದಕಟ್ಟೆ ಕರಿಬಸಪ್ಪ, ಹೆಚ್.ಬಿ. ಬಸವರಾಜಪ್ಪ ಬಣಕಾರ, ನ್ಯಾಮತಿ ತಾಲ್ಲೂಕು ಅಧ್ಯಕ್ಷ ಬೆಳಗುತ್ತಿ ಉಮೇಶ್, ಹೆಚ್.ಎ.ಉಮಾಪತಿ. ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ ಮೈಸೂರು ಮಹಾದೇವಪ್ಪ, ಕುಮಾರಸ್ವಾಮಿ, ಸುದೀರ್, ಬಿಜಾಪುರ ಅರವಿಂದ ಕುಲಕರ್ಣಿ, ಹುಣಸೂರು ಜಯರಾಂ, ರಾಯಚೂರು ಶಾಮ್‌ಸುಂದರ್ ಕೀರ್ತಿ, ಹುಬ್ಬಳಿ ಯು.ಡಿ ಒಡೆಯರ್ ಮತ್ತು ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಗಲಭೆಕೋರರ ಮನೆಗಳ ಮೇಲೆ ಬುಲ್ಡೋಜರ್ ಪ್ರಹಾರ

ಉತ್ತರ ಪ್ರದೇಶ

ಪ್ರಯಾಗ್‌ರಾಜ್, ಜೂ. 12 – ಕಳೆದ ಶುಕ್ರವಾರ ನಡೆದ ಹಿಂಸಾಚಾರದ ರೂವಾರಿ ಎನ್ನಲಾದ ವ್ಯಕ್ತಿಗೆ ಸೇರಿದ ಮನೆಯನ್ನು ಉತ್ತರ ಪ್ರದೇಶದ ಪ್ರಯಾಗ್‌ರಾಜ್ ಅಭಿವೃದ್ಧಿ ಪ್ರಾಧಿಕಾರ ಭಾನುವಾರ ಧ್ವಂಸಗೊಳಿಸಿದೆ. ಇದಕ್ಕೂ ಮುಂಚೆ ಸಹರಾನ್‌ಪುರದಲ್ಲಿ ಕಲ್ಲು ತೂರಾಟದಲ್ಲಿ ಭಾಗಿಯಾದ ಆರೋಪ ಎದುರಿಸುತ್ತಿದ್ದ ಇನ್ನಿಬ್ಬರ ಮನೆಗಳನ್ನೂ ಸಹ ಧ್ವಂಸಗೊಳಿಸಲಾಗಿತ್ತು.

ರಾಹತ್ ಕಾಲೋನಿಯ ಮುಜಾಮ್ಮಿಲ್ ಹಾಗೂ ಖಾತಾ ಖೇಡಿಯ ಅಬ್ದುಲ್ ವಕೀರ್ ವಿರುದ್ಧ ಕಲ್ಲು ತೂರಾಟದ ಆರೋಪವಿತ್ತು. ನಗರ ಪಾಲಿಕೆಯ ತಂಡಗಳು ಅವರ ಅಕ್ರಮ ಆಸ್ತಿಗಳನ್ನು ಧ್ವಂಸಗೊಳಿಸುತ್ತಿವೆ ಎಂದು ಸಹರಾನ್‌ಪುರದ ಪೊಲೀಸ್ ವರಿಷ್ಠಾಧಿಕಾರಿ ರಾಜೇಶ್ ಕುಮಾರ್ ತಿಳಿಸಿದ್ದಾರೆ.

ಪ್ರಯಾಗ್‌ರಾಜ್‌ನಲ್ಲಿ ಪ್ರಮುಖ ಆರೋಪಿ ಜಾವಿದ್ ಅಹಮದ್‌ಗೆ ಸೇರಿದ ಜೆ.ಕೆ. ಆಶಿಯಾನ ಮನೆಯನ್ನು ಧ್ವಂಸಗೊಳಿಸಲಾಗಿದೆ. ಈ ಮನೆ ಕರೇಲಿ ಪ್ರದೇಶದಲ್ಲಿತ್ತು. ಪಿ.ಡಿ.ಎ. ಅನುಮತಿ ಪಡೆಯದೇ ಮನೆ ನಿರ್ಮಿಸಲಾಗಿತ್ತು. ಈ ಬಗ್ಗೆ ಮೇ 10ರಂದು ನೋಟಿಸ್ ಕಳಿಸಲಾಗಿತ್ತು. ಮೇ 24ರಂದು ಈ ಬಗ್ಗೆ ಉತ್ತರಿಸುವಂತೆ ತಿಳಿಸಲಾಗಿತ್ತು. ಆದರೆ, ಜಾವಿದ್ ಇಲ್ಲವೇ ಆತನ ಪರ ವಕೀಲರು ಬಂದಿರಲಿಲ್ಲ. ಹೀಗಾಗಿ ಮೇ 25ರಂದು ಧ್ವಂಸದ ಆದೇಶ ಹೊರಡಿಸಲಾಗಿತ್ತು ಎಂದು ಪ್ರಯಾಗ್‌ರಾಜ್‌ನ ಪಿ.ಡಿ.ಎ. ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಭಾನುವಾರ ಬೆಳಿಗ್ಗೆ ಜಾವಿದ್ ಅಹಮದ್ ಮನೆಯವರು ತಮ್ಮ ಕೆಲ ವಸ್ತುಗಳನ್ನು ತೆಗೆದುಕೊಂಡು ಮನೆ ಖಾಲಿ ಮಾಡಿದ್ದಾರೆ. ಧ್ವಂಸ ಕಾರ್ಯಾಚರಣೆ ವೇಳೆ ಮನೆಯಲ್ಲಿ ಯಾರೂ ಇರಲಿಲ್ಲ ಎಂದು ಪೊಲೀಸ್ ವರಿಷ್ಠಾಧಿಕಾರಿ (ನಗರ) ದಿನೇಶ್ ಕುಮಾರ್ ಸಿಂಗ್ ತಿಳಿಸಿದ್ದಾರೆ.

ಶುಕ್ರವಾರ ಪ್ರಯಾಗ್‌ರಾಜ್ ಹಾಗೂ ಸಹರಾನ್‌ಪುರಗಳ ಮಸೀದಿಗಳಲ್ಲಿ ಪ್ರಾರ್ಥನೆ ಸಲ್ಲಿಸಿದ ನಂತರ ಜನರು ಪೊಲೀಸರ ಮೇಲೆ ಕಲ್ಲು ತೂರಾಟ ನಡೆಸಿದ್ದರು. ಇತರೆ ನಾಲ್ಕು ನಗರಗಳಲ್ಲೂ ಸಹ ಇದೇ ರೀತಿಯ ಘಟನೆಗಳು ನಡೆದಿದ್ದವು. ಪ್ರಯಾಗ್‌ರಾಜ್‌ನಲ್ಲಿ ಜನರ ಗುಂಪು ಹಲವಾರು ಮೋಟಾರು ವಾಹನಗಳು ಹಾಗೂ ಗಾಡಿಗಳಿಗೆ ಬೆಂಕಿ ಹಚ್ಚಿತ್ತು. ಪೊಲೀಸ್ ವಾಹನವೊಂದಕ್ಕೆ ಬೆಂಕಿ ಹಚ್ಚುವ ಯತ್ನ ನಡೆಸಲಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ಈ ಘಟನೆಯ ನಂತರ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರಾಗಿರುವ ಮೃತ್ಯುಂಜಯ ಕುಮಾರ್ ಅವರು ಟ್ವಿಟ್ಟರ್‌ನಲ್ಲಿ ಹೇಳಿಕೆ ನೀಡಿ, ವಿಧ್ವಂಸಕರು ನೆನಪಿಡಬೇಕು. ಪ್ರತಿ ಶುಕ್ರವಾರದ ನಂತರ ಶನಿವಾರ ಬರುತ್ತದೆ ಎಂದಿದ್ದರು. ಹೇಳಿಕೆಯ ಜೊತೆಗೆ ಬುಲ್ಡೋಜರ್ ಒಂದು ಕಟ್ಟಡವನ್ನು ಧ್ವಂಸಗೊಳಿಸುವ ಚಿತ್ರ ಪ್ರಕಟಿಸಿದ್ದರು.

# ಸ್ಪರ್ಧಾತ್ಮಕ ಪರೀಕ್ಷೆ ಸದುಪಯೋಗ ಪಡಿಸಿಕೊಳ್ಳಲು ಕರೆ


ಮಲೇಬೆನ್ನೂರು

ಮಲೇಬೆನ್ನೂರು, ಜೂ. 12- ವಿಶ್ವಜ್ಞಾನಿ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ 131ನೇ ಜನ್ಮದಿನದ ಪ್ರಯುಕ್ತ ದಲಿತ ವಿದ್ಯಾರ್ಥಿ ಪರಿಷತ್ ವತಿಯಿಂದ ಪ್ರಥಮ ಬಾರಿಗೆ ನಾಡಿನ ವಿದ್ಯಾರ್ಥಿ ಯುವಜನರಿಗಾಗಿ ಡಾ. ಬಿ. ಆರ್. ಅಂಬೇಡ್ಕರ್ ಅವರ ಕುರಿತು ರಾಜ್ಯಮಟ್ಟದ ಸ್ಪರ್ಧಾತ್ಮಕ ಪರೀಕ್ಷೆ ಏರ್ಪಡಿಸಲಾಗಿದ್ದು, ಇದರ ಸದುಪಯೋಗ ಪಡೆದುಕೊಳ್ಳಿ ಎಂದು ಪುರಸಭೆ ಸದಸ್ಯ ಸಾಬೀರ್ ಅಲಿ ತಿಳಿಸಿದರು.

ಪಟ್ಟಣದ ಶ್ರೀ ಬೀರಲಿಂಗೇಶ್ವರ ಪ್ರಥಮ ದರ್ಜೆ ಕಾಲೇಜಿನಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ಬಗ್ಗೆ ಮಾಹಿತಿ ನೀಡಿ ಮಾತನಾಡಿದ ಸಾಬೀರ್ ಅಲಿ, ದಲಿತ ವಿದ್ಯಾರ್ಥಿ ಪರಿಷತ್ತು ವಿದ್ಯಾರ್ಥಿಗಳನ್ನು ರಾಜಕಾರಣಿಗಳ ಹಾಗೂ ಧಾರ್ಮಿಕ ಭಾವನೆಗಳನ್ನು ಕೆರಳಿಸುವವರ ನಡುವೆಯಿಂದ ಹೊರತಂದು ವಿದ್ಯಾರ್ಥಿಗಳ ಗುರಿ ಸಾಧನೆಗಳನ್ನು ತಲುಪಲು ಜ್ಞಾನ ಅವಶ್ಯಕವಾಗಿದೆ ಎಂದು ಹೇಳಿದರು.

ವಿದ್ಯಾರ್ಥಿಗಳು ತಮ್ಮ ಗುರಿ ಸಾಧಿಸಲು ಬೇಕಾದ ಸವಲತ್ತುಗಳಿಗಾಗಿ ಸಾಮಾಜಿಕ, ಶೈಕ್ಷಣಿಕ ನ್ಯಾಯಕ್ಕಾಗಿ ಸ್ಪರ್ಧಾತ್ಮಕ ಪರೀಕ್ಷೆ ನಡೆಸಲಾಗುತ್ತಿದೆ. ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಥಮ ಬಹುಮಾನ ಮೂರು ಲಕ್ಷ, ದ್ವಿತೀಯ ಬಹುಮಾನ ಎರಡು ಲಕ್ಷ, ತೃತೀಯ ಬಹುಮಾನ ಒಂದು ಲಕ್ಷ ನಗದು ಬಹುಮಾನವಿದೆ. ಪ್ರಥಮ ದರ್ಜೆಯಲ್ಲಿ ವಿಜೇತರಾದ ಮೊದಲ ನೂರು ವಿಜೇತರಿಗೆ ರಾಜ್ಯದ ಪ್ರತಿಷ್ಠಿತ ಸ್ಪರ್ಧಾ ಪರೀಕ್ಷಾ ಕೇಂದ್ರಗಳಲ್ಲಿ ಉಚಿತ ಐ.ಎ.ಎಸ್ ಮತ್ತು ಕೆ.ಎ.ಎಸ್ ತರಬೇತಿ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ 9164495822 ಸಂಖ್ಯೆಗೆ ಕರೆ ಮಾಡಿ ಮಾಹಿತಿ ಪಡೆದುಕೊಳ್ಳುವಂತೆ ಸಾಬೀರ್ ಅಲಿ ತಿಳಿಸಿದರು.

ಈ ಸಂದರ್ಭದಲ್ಲಿ ಶ್ರೀ ಬೀರಲಿಂಗೇಶ್ವರ ಕಾಲೇಜಿನ ಪ್ರಾಂಶುಪಾಲ ಆರ್.ರಾಜಪ್ಪ, ಉಪನ್ಯಾಸಕರಾದ ಕುಬೇರಪ್ಪ, ಪವಿತ್ರ, ಅರ್ಪಿತ, ಪುರಸಭೆ ಸದಸ್ಯರಾದ ಭೋವಿ ಶಿವು, ಎಂ.ಬಿ.ರುಸ್ತುಮ್ ಅಲಿ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## 15 ರಂದು ದಿಶಾ ಸಭೆ

ದಾವಣಗೆರೆ ಜೂ. 12- ಸಂಸದ ಜಿ.ಎಂ. ಸಿದ್ದೇಶ್ವರ ಅಧ್ಯಕ್ಷತೆಯಲ್ಲಿ ಇದೇ ದಿನಾಂಕ 15 ರಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾ ಪಂಚಾಯತಿ ಕಚೇರಿಯ ಮುಖ್ಯ ಸಭಾಂಗಣದಲ್ಲಿ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ 'ದಿಶಾ' ಸಭೆ ನಡೆಯಲಿದೆ.

# ಹರಿಹರ ನಗರದ ಅಭಿವೃದ್ಧಿಗೆ 38 ಕೋಟಿ ಬಿಡುಗಡೆ

**ಮಾಜಿ ಶಾಸಕ ಶಿವಶಂಕರ್ ಸವಾಲಿಗೆ ಶಾಸಕ ರಾಮಪ್ಪ ಉತ್ತರ**

ಹರಿಹರ, ಜೂ. 12- ನಗರದ ಚರಂಡಿ, ರಸ್ತೆ, ಬೀದಿ ದೀಪಗಳ ಅಭಿವೃದ್ಧಿಗಾಗಿ ನಗರಸಭೆಗೆ ನಗರೋತ್ಥಾನ ಯೋಜನೆ ಅಡಿ ಸರ್ಕಾರದಿಂದ 30 ಕೋಟಿ ರೂ. ಅನುದಾನ ಬಿಡುಗಡೆ ಆಗಿದ್ದು, ಅದರಲ್ಲಿ 25 ಕೋಟಿ ರೂ. ಅನುದಾನ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಟೆಂಡರ್ ಪ್ರಕ್ರಿಯೆಯಲ್ಲಿದೆ. ಹಿಂದೆ 8 ಕೋಟಿ ರೂ. ಹಣ ಬಿಡುಗಡೆ ಆಗಿದ್ದನ್ನು ಸರ್ಕಾರ ಕೊರೊನಾ ಕಾರಣದಿಂದ ತಡೆ ಹಿಡಿದಿದ್ದನ್ನು ಮತ್ತೆ ನಾನು ಹೋರಾಟ ಮಾಡಿ ಮರು ಮಂಜೂರು ಮಾಡಿಸಿಕೊಂಡು ಬಂದಿದ್ದು, ಈ ಅನುದಾನ ಸಹ ಟೆಂಡರ್ ಪ್ರಕ್ರಿಯೆಯಲ್ಲಿ ಇದೆ ಎಂದು ಹರಿಹರ ಶಾಸಕ ಎಸ್. ರಾಮಪ್ಪ ಹೇಳಿದ್ದಾರೆ.

20 ಕೋಟಿ ರೂ. ಹಣ ಯಾವ ಇಲಾಖೆಯಿಂದ ಮತ್ತು ಯಾವ ಶೀರ್ಷಿಕೆ ಅಡಿಯಲ್ಲಿ ಬಿಡುಗಡೆ ಆಗಿದೆ ಎಂದು ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಕೇಳಿದ್ದ ವಿಚಾರಕ್ಕೆ ಸಂಬಂಧಿಸಿದಂತೆ ಇಂದು ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ನಾನು ಮಾಜಿ ಶಾಸಕರಂತೆ ಸುಳ್ಳು ಹೇಳಿ ಜನರ ದಾರಿ ತಪ್ಪಿಸುವ ಕೆಲಸವನ್ನು ಮಾಡಿಲ್ಲ. ನನ್ನ ಅವಧಿಯಲ್ಲಿ ಎಷ್ಟು ಅಭಿವೃದ್ಧಿ ಕೆಲಸಗಳು ಆಗಿವೆ ಎಂಬುದರ ಬಗ್ಗೆ ಇನ್ನೂ ಸ್ವಲ್ಪ ದಿನಗಳ ನಂತರ ದಾಖಲೆಗಳನ್ನು ನೀಡುವುದಾಗಿ ಶಾಸಕ ರಾಮಪ್ಪ ಹೇಳಿದ್ದಾರೆ.

ನಗರದ ಅಭಿವೃದ್ಧಿ ಕಾಮಗಾರಿಗೆ ಒಟ್ಟು 38 ಕೋಟಿ ರೂ. ಹಣ ಬಿಡುಗಡೆ ಆಗಿದ್ದು, ನಗರದ ಬಹುತೇಕ ರಸ್ತೆ, ಚರಂಡಿ ಸೇರಿದಂತೆ ಇತರೆ ಕಾಮಗಾರಿಗಳನ್ನು ಮಾಡಿಸುವುದಾಗಿ ಹೇಳಲಾಗಿದೆ. ಕಾಳಿದಾಸ ನಗರ, ಬೆಂಕಿನಗರ ಬಡಾವಣೆಯ ರಸ್ತೆ, ಚರಂಡಿ ಕಾಮಗಾರಿಗೆ 4 ಕೋಟಿ ರೂ. ಅನುದಾನ ಮಂಜೂರಾಗಿರುತ್ತದೆ. ನನ್ನ ಅಧಿಕಾರದ ಅವಧಿಯಲ್ಲಿ ಡಿ.ಬಿ. ಕೆರೆ ಚಾನಲ್‌ಗೆ ತಡೆಗೋಡೆ ನಿರ್ಮಾಣ ಮಾಡುವುದಾಗಿ ಅವರು ತಿಳಿಸಿದರು.

ಮಾಜಿ ಶಾಸಕರು ತಮ್ಮ ಆಡಳಿತ ಅವಧಿಯಲ್ಲಿ ತಡೆಗೋಡೆಗೆ 2 ಕೋಟಿ ಅನುದಾನ ಬಿಡುಗಡೆ ಮಾಡಿಸಿದ ಬಗ್ಗೆ ದಾಖಲೆಗಳನ್ನು ಒದಗಿಸಲಿ ಎಂದೂ ಸಹ ಅವರು ಸವಾಲು ಹಾಕಿದ ಅವರು, ತಮ್ಮ ನಾಲ್ಕು ವರ್ಷಗಳ ಅವಧಿಯಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳ ಮಾಹಿತಿ ನೀಡಿದರು.

ಯುಜಿಡಿ ಮತ್ತು ಜಲಸಿರಿ ಕಾಮಗಾರಿಯಿಂದ ರಸ್ತೆಯಲ್ಲಿ ದೊಡ್ಡ ಪ್ರಮಾಣದ ಗುಂಡಿಗಳು ಬಹಳ ಇರೋದರಿಂದ ಆಟೋ ಓಡಿಸಲು ತೊಂದರೆ ಆಗುತ್ತಿದೆ ಎಂದು ಆಟೋ ಚಾಲಕರು ಹೇಳಿದ್ದರು. ನಗರಸಭೆಗೆ 30 ಕೋಟಿ ರೂ. ಮತ್ತು 8 ಕೋಟಿ ರೂ. ಅನುದಾನ ಬಿಡುಗಡೆ ಆಗಿದೆ, ಸದ್ಯದಲ್ಲಿ ನಗರಸಭೆ ವತಿಯಿಂದ ಎಲ್ಲಾ ರಸ್ತೆಗಳನ್ನು ದುರಸ್ತಿಪಡಿಸುವುದಾಗಿ ಭರವಸೆಯನ್ನು ನೀಡಿದ್ದೆ. ಅದನ್ನು ಬಿಟ್ಟು ನಾನು 20 ಕೋಟಿ ರೂ. ಅನುದಾನ ಬಿಡುಗಡೆ ಆಗಿದೆ ಎಂದು ಹೇಳಿಲ್ಲ. ಇದಕ್ಕೆ ಯಾವ ಶೀರ್ಷಿಕೆ ಮತ್ತು ಯಾವ ಇಲಾಖೆಯ ಹೆಸರು ಹೇಳುವ ಅವಶ್ಯಕತೆಯಿಲ್ಲ ಎಂದು ಹೇಳಿದರು.

ಈ ಸಂದರ್ಭದಲ್ಲಿ ನಗರಸಭೆ ಮಾಜಿ ಅಧ್ಯಕ್ಷ ಬಿ. ರೇವಣಸಿದ್ದಪ್ಪ, ಮಾಜಿ ಸದಸ್ಯ ಹಂಚಿನ ನಾಗಪ್ಪ ಮತ್ತಿತರರು ಉಪಸ್ಥಿತರಿದ್ದರು.

## ರಕ್ತದಾನದ ಮಹತ್ವ ಸಾರಲು ಪ್ರಪಂಚ ಪರ್ಯಟನೆಗೆ ನಿರ್ಧಾರ

ದಾವಣಗೆರೆ, ಜೂ. 12- ರಕ್ತದಾನದ ಮಹತ್ವವನ್ನು ಸಾರುವ ಸದುದ್ಧೇಶದಿಂದ ಪ್ರಪಂಚ ಪರ್ಯಾಟನೆ ಮಾಡುವ ಇಚ್ಛೆ ಹೊಂದಿದ್ದೇನೆ ಎಂದು ಮಹಡಿಮನೆ ಶಿವಕುಮಾರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕಳೆದ 23 ವರ್ಷಗಳಿಂದ ಸುಮಾರು 88 ಬಾರಿ ರಕ್ತದಾನ ಮಾಡಿದ್ದು, ಒಬ್ಬ ಆರೋಗ್ಯವಂತ ಮನುಷ್ಯ ರಕ್ತದಾನ ಮಾಡುವುದರಿಂದ ಮೂರು ಜನರ ಜೀವ ಉಳಿಸಬಹುದಾಗಿದೆ. ರಕ್ತದಾನದ ಬಗ್ಗೆ ಅರಿವು ಎಲ್ಲರಲ್ಲೂ ಬರಬೇಕೆಂಬ ಸದಾಶಯ ನನ್ನದಾಗಿದೆ ಎಂದರು. ಪ್ರಪಂಚ ಪರ್ಯಟನೆಗೆ ಸರ್ಕಾರ ಸಹಾಯ ಹಸ್ತ ಚಾಚಬೇಕಾಗಿದೆ. ಪ್ರಧಾನಿ ನರೇಂದ್ರ ಮೋದಿ ಭೇಟಿ ಮಾಡುವ ಉದ್ದೇಶ ಕೂಡ ನನ್ನದಾಗಿದೆ ಎಂದು ಹೇಳಿದರು.

# ಹರಪನಹಳ್ಳಿ : ರಾಜೀ ಸಂಧಾನದಿಂದ ನೆಮ್ಮದಿಯ ಜೀವನ



ಹರಪನಹಳ್ಳಿ, ಜೂ. 12 - ತಾಲ್ಲೂಕು ಕಾನೂನು ಸೇವೆಗಳ ಪ್ರಾಧಿಕಾರವು ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದ ಮೇರೆಗೆ ತಾಲ್ಲೂಕಿನ ಜೆ.ಎಂ.ಎಫ್.ಸಿ ನ್ಯಾಯಾಲದಲ್ಲಿ ಇದೇ ದಿನಾಂಕ 25 ರಂದು ರಾಷ್ಟ್ರೀಯ ಲೋಕ ಅದಾಲತ್ ನಡೆಯಲಿದ್ದು, ಸಾರ್ವಜನಿಕ ಕಕ್ಷಿದಾರರು ರಾಜೀ ಆಗುವಂತಹ ಪ್ರಕರಣಗಳನ್ನು ನಿಮ್ಮ ವಕೀಲರ ಮೂಲಕ ಇತ್ಯರ್ಥ ಪಡಿಸಿಕೊಳ್ಳುವಂತೆ ಹಿರಿಯ ಸಿವಿಲ್ ನ್ಯಾಯಾಧೀಶರಾದ ಎಂ.ಭಾರತಿ ಕರೆ ನೀಡಿದರು.

ಪಟ್ಟಣದ ನ್ಯಾಯಾಲಯದ ಆವರಣದಲ್ಲಿ ಶುಕ್ರವಾರ ತಾಲ್ಲೂಕು ಕಾನೂನು ಸೇವಾ ಸಮಿತಿ ಹರಪನಹಳ್ಳಿ ಇವರ ಸಂಯುಕ್ತ ಆಶ್ರಯದಲ್ಲಿ ಉಭಯ ನ್ಯಾಯಾಧೀಶರುಗಳ ನೇತೃತ್ವದಲ್ಲಿ ವಕೀಲರ ಸಂಘದಿಂದ ನಡೆಯಲಿರುವ ಮೆಗ ಲೋಕ ಅದಾಲತ್‌ನ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಸಾರ್ವಜನಿಕ ಕಕ್ಷಿದಾರರು ರಾಜೀಯಾಗುವಂತಹ ಪ್ರಕರಣಗಳನ್ನು ಇತ್ಯರ್ಥ ಪಡಿಸಿಕೊಂಡು ನೆಮ್ಮದಿಯ ಜೀವನ ಮಾಡಿಕೊಳ್ಳಿ ಎಂದು ಕಕ್ಷಿದಾರರಿಗೆ ಸಲಹೆ ನೀಡಿದರು.

ಇತ್ಯರ್ಥ ಪಡಿಸಲ್ಪಡುವ ಕ್ರಿಮಿನಲ್ ಮತ್ತು ಸಿವಿಲ್ ಪ್ರಕರಣಗಳನ್ನು ಸಾರ್ವಜನಿಕರು ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ಇತ್ಯರ್ಥ ಪಡಿಸಿಕೊಳ್ಳಬೇಕು ಎಂದರು.

ವಕೀಲರ ಸಂಘದ ಅಧ್ಯಕ್ಷ ಕೆ. ಜಗದಪ್ಪ, ಮಾತನಾಡಿ, ಸಮಾಜದಲ್ಲಿ ದ್ವೇಷದಿಂದ ಏನನ್ನು ಸಾದಿಸಲು ಸಾಧ್ಯವಿಲ್ಲ.ಆದ್ದರಿಂದ ಒಂದೇ ಕುಟುಂಬಕ್ಕೆ ಸಂಬಂಧ ಪಟ್ಟ ಪ್ರಕರಣಗಳನ್ನು ಕಕ್ಷಿದಾರರು ರಾಜೀ ಸಂಧಾನದ ಮೂಲಕ ಇತ್ಯರ್ಥ ಪಡಿಸಿಕೊಂಡು ನಿಮ್ಮಗಳ ಮನಸ್ಸುಗಳನ್ನು ಪರಿವರ್ತನೆ ಮಾಡಿಕೊಳ್ಳಿ, ಸಮಾಜದ ಉತ್ತಮ ಪ್ರಜೆಯಾಗಿ ಪ್ರತಿಭಾವಂತ ನಾಗರಿಕರಾಗಿ ನಿಮ್ಮಗಳ ಕುಟುಂಬದ ಒಬ್ಬ ಉತ್ತಮ ಜವಾಬ್ದಾರಿಯುತ ನಾಗರಿಕರಾಗಿ ಜೀವನವನ್ನು ಮಾಡಿಕೊಳ್ಳಿ ಎಂದು ಹೇಳಿದರು.

ಈ ಸಂದರ್ಭದಲ್ಲಿ ಸಿವಿಲ್ ನ್ಯಾಯಾಧೀಶರಾದ ಫಕ್ಕೀರವ್ವ ಕೆಳಗೇರಿ , ವಕೀಲರ ಸಂಘದ ಉಪಾಧ್ಯಕ್ಷ ಡಿ.ಬಿ.ವಾಸುದೇವ, ಜಂಟಿ ಕಾರ್ಯದರ್ಶಿ ಎಂ.ನಾಗೇಂದ್ರಪ್ಪ, ಖಜಾಂಚಿ ಹುಲಿಯಪ್ಪ ಅಪರ ಸರ್ಕಾರಿ ವಕೀಲ ವಿ.ಜಿ. ಪ್ರಕಾಶ್ ಗೌಡ, ಸರ್ಕಾರಿ ಅಭಿಯೋಜಕರಾದ ಎನ್. ಮೀನಾಕ್ಷಿ, ಹಿರಿಯ ವಕೀಲ ರಾಮನಗೌಡ ಪಾಟೀಲ್, ಜಿ. ಗಂಗಾಧರ್ ಗುರುಮಠ್, ಬಿ. ರೇವನಗೌಡ, ವೀರಣ್ಣ, ಎಸ್.ಎಂ.ರುದ್ರಮನಿ, ಕೆ.ಬಸವರಾಜ್, ಎಂ. ಮೃತ್ಯುಂಜಯ್ಯ, ಮಂಜ್ಯಾನಾಯ್ಕ ಕೆ.ಎಸ್. ಸಣ್ಣ ನಿಂಗನಗೌಡ, ಬಾಗಳಿ ಮಂಜುನಾಥ್, ಕೊಟ್ರೇಶ್, ಬಸವರಾಜ್ ಮತ್ತು ಇತರರು ಉಪಸ್ಥಿತರಿದ್ದರು.

## ಮಲೇಬೆನ್ನೂರು: ದೀನದಯಾಳ್ ಅಂತ್ಯೋದಯ ಯೋಜನೆಗೆ ಅರ್ಜಿ

ಮಲೇಬೆನ್ನೂರು, ಜೂ. 12- ಮಲೇಬೆನ್ನೂರು ಪುರಸಭೆ ವತಿಯಿಂದ ದೀನದಯಾಳ್ ಅಂತ್ಯೋದಯ ಯೋಜನೆ-ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ ಯೋಜನೆಯಡಿ ಸ್ವಯಂ ಉದ್ಯೋಗ ಕಾರ್ಯಕ್ರಮದಡಿ, ವ್ಯಕ್ತಿಗತ ಉದ್ಯಮಶೀಲತೆ (ಸಾಲ ಮತ್ತು ಸಹಾಯ ಧನ), ಗುಂಪು ಉದ್ಯಮ ಕಾರ್ಯಕ್ರಮದಡಿ, ಸ್ವ-ಸಹಾಯ ಗುಂಪುಗಳ ಬ್ಯಾಂಕ್ ಕ್ರೆಡಿಟ್ ಲಿಂಕೇಜ್ ಕಾರ್ಯಕ್ರಮದಡಿ ಸಾಲ ಪಡೆಯಲು ಬಡತನ ರೇಖೆಗಿಂತ ಕೆಳಗಿರುವ ಮಲೇಬೆನ್ನೂರು ಪಟ್ಟಣದ ನಿವಾಸಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಯನ್ನು ಇದೇ ದಿನಾಂಕ 30 ರ ಒಳಗಾಗಿ ಕಚೇರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ಶಾಖೆಯಲ್ಲಿ ವಿಚಾರಿಸಬಹುದಾಗಿದೆ ಎಂದು ಮಲೇಬೆನ್ನೂರು ಪುರಸಭೆ ಮುಖ್ಯಾಧಿಕಾರಿ ತಿಳಿಸಿದ್ದಾರೆ.

## ವರ್ತಕ ನಾಗರಾಜ ಶೆಟ್ಟಿ ನಿಧನ



ದಾವಣಗೆರೆ, ಜೂ.12- ನಗರದ ಹಿರಿಯ ವರ್ತಕರೂ, ಶಿವರಾಮ ಟ್ರೇಡರ್ಸ್ ಮಾಲೀಕರೂ ಆದ ಆರ್. ಎಸ್. ನಾಗರಾಜಶೆಟ್ಟಿ ಅವರು ಇಂದು ಮಧ್ಯಾಹ್ನ 3.30ಕ್ಕೆ ಹೃದಯಾಘಾತದಿಂದ ನಿಧನರಾದರು.

ಮೃತರಿಗೆ ಸುಮಾರು 86 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರ, ಓರ್ವ ಪುತ್ರಿ ಮತ್ತು ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ನಾಳೆ ದಿನಾಂಕ 13ರ ಸೋಮವಾರ ಮಧ್ಯಾಹ್ನ 2 ಗಂಟೆಗೆ ವೈಕುಂಠಧಾಮದಲ್ಲಿ ನಡೆಯಲಿದೆ.

ಸಾಮಾಜಿಕ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ನಾಗರಾಜ ಶೆಟ್ಟಿ ಅವರು, ಲಯನ್ಸ್ ಕ್ಲಬ್ ಹಿರಿಯ ಸದಸ್ಯರಾಗಿದ್ದರು. ಲಯನ್ಸ್ ಕಟ್ಟಡದ ಪ್ರಮುಖ ದಾನಿಗಳಲ್ಲೊಬ್ಬರಾಗಿದ್ದ ಅವರು, ಲಯನ್ಸ್ ಟ್ರಸ್ಟ್ ಟ್ರಸ್ಟಿಯೂ ಆಗಿದ್ದರು. ನಾಗರಾಜ ಶೆಟ್ಟಿ ಅವರ ನಿಧನದ ಗೌರವಾರ್ಥ ಲಯನ್ಸ್ ಸಂಸ್ಥೆಯ ಶಾಲೆಗೆ ನಾಳೆ ಸೋಮವಾರ ರಜೆ ಘೋಷಿಸಲಾಗಿದೆ.


**ಭಾವಪೂರ್ಣ ಶ್ರದ್ಧಾಂಜಲಿ**



ದಾವಣಗೆರೆ ನಗರದ ಹಿರಿಯ ವರ್ತಕರೂ,
ದಾವಣಗೆರೆ ಲಯನ್ಸ್ ಕ್ಲಬ್ ಪ್ರಮುಖ ದಾನಿಗಳೂ,
ಲಯನ್ಸ್ ಕ್ಲಬ್ ಹಿರಿಯ ಸದಸ್ಯರೂ,
ಲಯನ್ಸ್ ಟ್ರಸ್ಟ್ ಹಿರಿಯ ಟ್ರಸ್ಟಿಗಳೂ ಆದ

**ಶ್ರೀ ಆರ್.ಎಸ್. ನಾಗರಾಜ ಶೆಟ್ಟಿ**

ಅವರು ದಿನಾಂಕ 12.06.2022 ರಂದು ನಿಧನರಾಗಿದ್ದು, ಶ್ರೀಯುತರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ನೀಡಲೆಂದು ಭಗವಂತನಲ್ಲಿ ಪ್ರಾರ್ಥನೆ.

**ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಹಾಗೂ ಸರ್ವ ಸದಸ್ಯರು ಮತ್ತು ಟ್ರಸ್ಟಿಗಳು**
**ಲಯನ್ಸ್ ಕ್ಲಬ್, ದಾವಣಗೆರೆ.**
**ಲಯನ್ಸ್ ಟ್ರಸ್ಟ್, ದಾವಣಗೆರೆ.**
ಲಯನ್ಸ್ ಶಾಲೆ - ಕಾಲೇಜು, ದಾವಣಗೆರೆ.



|| ಶ್ರೀ ಗುರು ಕೊಟ್ಟೂರೇಶ್ವರ ಪ್ರಸನ್ನ ||

**ಕೈಲಾಸ ಶಿವಗಣಾರಾಧನೆ ಆಹ್ವಾನ**



**ಶ್ರೀಮತಿ ಡಾ|| ರೂಪ ಮತ್ತು ಶ್ರೀ ಡಾ|| ಜ್ಯೋತಿಸ್ವರೂಪ್**
ಇವರು ಮಾಡುವ ವಿಜ್ಞಾಪನೆಗಳು.

**ಶ್ರೀಮತಿ ಬಿ.ಎಸ್. ಮಂಜುಳಾ**
ನಮ್ಮ ಮಾತೃಶ್ರೀಯವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**"ಕೈಲಾಸ ಶಿವಗಣಾರಾಧನೆ"ಯನ್ನು**
ದಿನಾಂಕ : 14.06.2022ನೇ
ಮಂಗಳವಾರ ಮಧ್ಯಾಹ್ನ : 1.30 ಗಂಟೆಗೆ

ನೆರವೇರಿಸಲು ನಿಶ್ಚಯಿಸಿರುವುದರಿಂದ, ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಸ್ಥಳ : **ದಾವಣಗೆರೆ ಜಿಲ್ಲಾ ನಿವೃತ್ತ ನೌಕರರ ಸಂಘ, # 3308/9**
**12ನೇ ಮುಖ್ಯ ರಸ್ತೆ, ಎಂ.ಸಿ.ಸಿ. "ಬಿ" ಬ್ಲಾಕ್, ದಾವಣಗೆರೆ-577 004.**
**ಮೊ. : 97398 42975, 98441 90463**

ಸದಾ ನಿಮ್ಮನೆನಪಿನಲ್ಲಿ : **ಶ್ರೀಮತಿ ಡಾ|| ರೂಪ, ಶ್ರೀ ಡಾ|| ಜ್ಯೋತಿಸ್ವರೂಪ್ ಮತ್ತು ಭರಮಶೆಟ್ರು ಬಂಧು-ಮಿತ್ರರು**

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.



**ಭಾವಪೂರ್ಣ ಶ್ರದ್ಧಾಂಜಲಿ**



ಹಿರಿಯರು, ಆತ್ಮೀಯರೂ ಆದ

**ಆರ್.ಎಸ್. ನಾಗರಾಜ ಶೆಟ್ಟಿ**

ಅವರು ದಿನಾಂಕ 12.06.2022ರ ಭಾನುವಾರ ನಿಧನರಾಗಿದ್ದು, ಭಗವಂತನು ಅವರ ಆತ್ಮಕ್ಕೆ ಚಿರಶಾಂತಿಯನ್ನು ಹಾಗೂ ಅವರ ಕುಟುಂಬ ವರ್ಗಕ್ಕೆ ಅಗಲಿಕೆಯ ದುಃಖಭರಿಸುವ ಶಕ್ತಿಯನ್ನು ನೀಡಲಿ ಎಂದು ಪ್ರಾರ್ಥಿಸುತ್ತೇವೆ.

**ಓಂ ಕಲೆಕ್ಷನ್ಸ್**
**ಮಾಲೀಕರು ಹಾಗೂ ಸಿಬ್ಬಂದಿ ವರ್ಗ**
**ಚೇತನ ಹೋಟೆಲ್ ಹತ್ತಿರ, ಪಿ.ಜೆ. ಬಡಾವಣೆ, ದಾವಣಗೆರೆ.**


### ಚಿದಾನಂದ ಎಂ. ನಿಧನ



ದಾವಣಗೆರೆ ವಿದ್ಯಾನಗರ, ವಿನಾಯಕ ಬಡಾವಣೆ ವಾಸಿ ದಾವಣಗೆರೆ ತಾಲ್ಲೂಕು ಆಶ್ರಯ ಸಮಿತಿ ಸದಸ್ಯರು, ಬಿಜೆಪಿ ಮುಖಂಡರೂ ಆದ ಚಿದಾನಂದ ಎಂ. (43) ಇವರು ದಿನಾಂಕ 12.06.2022ರ ಭಾನುವಾರ ಸಂಜೆ 4 ಗಂಟೆಗೆ ನಿಧನರಾದರು. ತಾಯಿ, ಪತ್ನಿ, ಓರ್ವ ಪುತ್ರ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ: 13.06.2022ರ ಸೋಮವಾರ ಮಧ್ಯಾಹ್ನ 2 ಗಂಟೆಗೆ ಸ್ವಗ್ರಾಮ ಚನ್ನಗಿರಿ ತಾಲ್ಲೂಕು ಸೋಮಲಾಪುರ ಗ್ರಾಮದಲ್ಲಿ ನೆರವೇರಲಿದೆ.

### ಕೊಡಗನೂರಿನ ಲಕ್ಷ್ಮಿದೇವಿ ನಿಧನ



ದಾವಣಗೆರೆ ತಾಲ್ಲೂಕು ಕೊಡಗನೂರು ಗ್ರಾಮದ ವಾಸಿ ಕೆ.ಎಂ. ಪರಮೇಶ್ವರಪ್ಪನವರ ಧರ್ಮಪತ್ನಿ ಲಕ್ಷ್ಮಿದೇವಿ (59) ಅವರು ದಿನಾಂಕ 12.06.2022 ನೇ ಭಾನುವಾರ ರಾತ್ರಿ 8.30 ಕ್ಕೆ ನಿಧನರಾದರು. ಪತಿ, ಮೂವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 13.6.2022 ಸೋಮವಾರ ಮಧ್ಯಾಹ್ನ 2 ಗಂಟೆಗೆ ಕೊಡಗನೂರು ರುದ್ರಭೂಮಿಯಲ್ಲಿ ನೆರವೇರಲಿದೆ.

# ಮಾರ್ಕಂಡೇಶ್ವರ ಪದ್ಮಶಾಲಿ ಸಮಾಜ ಸೇವಾ ಸಂಘದ ಹಂಗಾಮಿ ಅಧ್ಯಕ್ಷರಾಗಿ ಆಯ್ಕೆ

ದಾವಣಗೆರೆ, ಜೂ. 11- ನಗರದ ಶ್ರೀ ಮಾರ್ಕಂಡೇಶ್ವರ ಪದ್ಮಶಾಲಿ ಸಮಾಜ ಸೇವಾ ಸಂಘದ ಹಂಗಾಮಿ ಅಧ್ಯಕ್ಷರಾಗಿ



ಹಾಲಿ ಉಪಾಧ್ಯಕ್ಷ ಐರಣಿ ನಿಂಗಪ್ಪ ಅವರನ್ನು ನೇಮಕ ಮಾಡಲು ತೀರ್ಮಾನಿಸಲಾಗಿದೆ ಎಂದು ಸಮಾಜದ ಗೌರವ ಕಾರ್ಯದರ್ಶಿ ಭಜನಿ ಹನುಮಂತಪ್ಪ, ಕಾರ್ಯದರ್ಶಿ ಪರಶುರಾಮ್ ತಿಳಿಸಿದ್ದಾರೆ.

ಶನಿವಾರ ನಡೆದ ಸಮಾಜದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಹಿಂದಿನ ಅಧ್ಯಕ್ಷರಾಗಿದ್ದ ಪಿ.ಜೆ.ನಾಗರಾಜ್ ಅವರು ಸಲ್ಲಿಸಿದ್ದ ರಾಜೀನಾಮೆಯನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

# ಆಟೋ ಚಾಲಕರ ಬಳಿ ಹಣ ವಸೂಲಿ; ತಪ್ಪು ಕಂಡರೆ ನಿರ್ದಾಕ್ಷಿಣ್ಯ ಕ್ರಮ : ಎಸ್ಪಿ

ದಾವಣಗೆರೆ, ಜೂ.12- ಆಟೋ ಚಾಲಕರ ಬಳಿ ಸಂಚಾರಿ ಪೊಲೀಸ್ ಸಿಬ್ಬಂದಿ ಹಣ ವಸೂಲಿ ಮಾಡುತ್ತಿದ್ದಾರೆ ಎಂಬ ಆರೋಪದ ಪ್ರಕರಣಕ್ಕೆ ಸಂಬಂಧಿಸಿದಂತೆ ಡಿವೈಎಸ್ಪಿ ನೇತೃತ್ವದಲ್ಲಿ ತನಿಖೆ ನಡೆಸುತ್ತಿದ್ದಾರೆ. ತಪ್ಪು ಕಂಡು ಬಂದರೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಲಾಗುವುದು ಎಂದು ಎಸ್ಪಿ ಸಿ.ಬಿ. ರಿಷ್ಯಂತ್ ತಿಳಿಸಿದ್ದಾರೆ.

ತಿಂಗಳ ಮಾಮೂಲಿ ವಸೂಲಿ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾರ ಖಾತೆಗೆ ಯಾವ ಹಣ ಬಂದಿದೆ. ಯಾವ ರೀತಿ ಬಂದಿದೆ ಎಂದು ತನಿಖೆ ನಡೆಸಬೇಕಾಗಿದೆ. ಈ ಪ್ರಕರಣದಲ್ಲಿ ಯಾವ ಸಿಬ್ಬಂದಿಯನ್ನೂ ರಕ್ಷಿಸುವ ಪ್ರಶ್ನೆಯೇ ಇಲ್ಲ ಎಂದು ತಮ್ಮ ಕಚೇರಿಯಲ್ಲಿ ನಿನ್ನೆ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಅವರು ಸ್ಪಷ್ಟಪಡಿಸಿದರು.

ಆಟೋ ಚಾಲಕರು ಸಂಘ ಮಾಡಿಕೊಂಡು ಚೀಟಿ ಮಾಡಿಕೊಂಡಿದ್ದೇವೆ ನಮ್ಮ ಬಳಿ ದಾಖಲೆ ಇದೆ ಎಂದಿದ್ದಾರೆ. ಈ ಕುರಿತು ಸೂಕ್ತ ತನಿಖೆಗೆ ಆದೇಶಿಸಿದ್ದೇನೆ ಎಂದು ಹೇಳಿದರು.

ಯಾವುದೇ ಕ್ರಿಮಿನಲ್ ಕೇಸ್ ವಾಪಾಸ್ ತೆಗೆದುಕೊಳ್ಳಲು ಕಾನೂನಿನಲ್ಲಿ ಅವಕಾಶವೇ ಇಲ್ಲ. ಇದನ್ನು ಪೊಲೀಸರು ಹೇಳಲು ಸಾಧ್ಯವೇ ಇಲ್ಲ. ಪದೇ ಪದೇ ಆರೋಪ ಮಾಡುವುದು ಸರಿಯಲ್ಲ. ಆರೋಪ ಮಾಡುವವರು ಕೂಡ ತನಿಖೆಗೆ ಸಹಕರಿಸಬೇಕೆಂದರು.

# ಸಿ.ಎಂ ಮನೆ ಎದುರು ಪಂಚಮಸಾಲಿ ಶ್ರೀಗಳ ಧರಣಿ

**(1ನೇ ಪುಟದಿಂದ)** ಬಂಧುಗಳಿಗೆ ಧರಣಿ ಬಗ್ಗೆ ವಿವರಿಸುವರು.

ಶ್ರೀಗಳ ಪ್ರವಾಸದಲ್ಲಿ ಸಂಘದ ಪದಾಧಿಕಾರಿಗಳಾದ ಶಿವಪ್ಪ ಗುರಿಕಾರ, ಸಿದ್ದು ಚಿಕ್ಕಬಿದರಿ, ಎಸ್.ಎಸ್. ರಾಮಲಿಂಗಣ್ಣನವರ, ಬಸವರಾಜ ಪಾಟೀಲ, ಎ.ಬಿ. ಪಾಟೀಲ, ಕೆ. ಶಿವಲಿಂಗಪ್ಪ ಮತ್ತಿತರರು ಜೊತೆಗಿರುವರು.

# ಗ್ರಾಮೀಣ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸಬೇಕು

## ಹರಪನಹಳ್ಳಿ: ಕಬಡ್ಡಿ ಕ್ರೀಡಾಕೂಟಕ್ಕೆ ಚಾಲನೆ ನೀಡಿದ ಶಾಸಕ ಎಸ್.ವಿ. ರಾಮಚಂದ್ರ



ಹರಪನಹಳ್ಳಿ, ಜೂ.12- ಗ್ರಾಮೀಣ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸಬೇಕು ಎಂದು ಶಾಸಕ ಎಸ್.ವಿ. ರಾಮಚಂದ್ರ ಸಲಹೆ ನೀಡಿದರು.

ಸಮೀಪದ ತೌಡೂರು ತಾಂಡಾದಲ್ಲಿ ಹಮ್ಮಿಕೊಂಡಿದ್ದ ಕಬಡ್ಡಿ ಕ್ರೀಡಾಕೂಟದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಕಬಡ್ಡಿ ನನಗೆ ಇಷ್ಟವಾದ ಕ್ರೀಡೆಯಾಗಿದ್ದು, ಮೊದಲ ಬಾರಿ ಜಗಳೂರಿನಲ್ಲಿ ಹೊನಲು ಬೆಳಕಿನ ರಾಜ್ಯಮಟ್ಟದ ಕಬಡ್ಡಿ ಕ್ರೀಡೆ ಆಯೋಜಿಸಿದ್ದರ ಫಲವಾಗಿ ನನ್ನ ಮೇಲಿಟ್ಟ ಕ್ಷೇತ್ರದ ಜನತೆಯ ಆಶೀರ್ವಾದದಿಂದ ಮೂರು ಬಾರಿ ಶಾಸಕನಾಗಿ ಆಯ್ಕೆಯಾಗಿರುವೆ. ಕ್ರೀಡೆಗಳನ್ನು ಆಯೋಜಿಸಿದಾಗ ಜರುಗುವ ಕೆಲ ತಪ್ಪುಗಳನ್ನು ಸರಿಪಡಿಸಿಕೊಂಡು ಕ್ರೀಡೆಗಳನ್ನು, ಮುನ್ನಡೆಸಬೇಕು ಎಂದು ಕಿವಿಮಾತು ಹೇಳಿದರು.

ವಿಧಾನಸಭಾ ಕ್ಷೇತ್ರದಲ್ಲಿ ಕನಸಿನ ನೀರಾವರಿ ಯೋಜನೆಗಳು ಸಾಕಾರಗೊಂಡಿದ್ದು, ಶೀಘ್ರದಲ್ಲಿ ಬರದ ನಾಡು ನೀರಾವರಿ ನಾಡಾಗಿ ಕಂಗೊಳಿಸುವ ಕಾಲ ಸನ್ನಿಹಿತವಾಗಿದೆ. ಮುಂದಿನ ದಿನಗಳಲ್ಲಿ ಜಗಳೂರಿನಲ್ಲಿ ಮತ್ತೊಮ್ಮೆ ರಾಜ್ಯ ಮಟ್ಟದ ಹೊನಲು ಬೆಳಕಿನ ಕಬಡ್ಡಿ ಕ್ರೀಡೆ ಆಯೋಜಿಸಿ ನಟ ಸುದೀಪ್ ಅವರನ್ನು ಆಹ್ವಾನಿಸಲಾಗುವುದು. ಅಂದಿನ ಕಬಡ್ಡಿ ಕ್ರೀಡೆಯಲ್ಲಿ ಭಾಗವಹಿಸಲು ಅರಸೀಕೆರೆ ಹೋಬಳಿಯ ಆಸಕ್ತ ಕಬಡ್ಡಿ ಕ್ರೀಡಾಪಟುಗಳಿಗೆ ತರಬೇತುದಾರರಿಂದ ತರಬೇತಿ ಕೊಡಿಸಿ ಬಲಿಷ್ಠ ತಂಡವನ್ನಾಗಿಸಲಾಗುವುದು ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕ್ಷೇತ್ರದ ಅಭಿವೃದ್ಧಿಗೆ ದಾಪುಗಾಲಿಟ್ಟಿದ್ದು, ಪ್ರಸಕ್ತ ಸಾಲಿನ ದಂಡಿನ ದುರುಗಮ್ಮನ ಕಾರ್ತಿಕದ ವೇಳೆಗೆ ಅರಸೀಕೆರೆಯನ್ನು ಮಾದರಿ ಗ್ರಾಮವನ್ನಾಗಿಸುವೆ ಎಂದು ಭರವಸೆ ನೀಡಿದರು.

ಬಿಜೆಪಿ ಯುವ ಮುಖಂಡ ವೈ.ಡಿ. ಅಣ್ಣಪ್ಪ ಮಾತನಾಡಿ, ಕ್ರೀಡಾಪಟುಗಳು ಸ್ಪರ್ಧಾ ಮನೋಭಾವ ಮೂಡಿಸಿಕೊಳ್ಳಬೇಕು. ಕ್ರೀಡಾಪಟುಗಳಿಗೆ ಸ್ಫೂರ್ತಿ ನೀಡಬೇಕು. ವಿದ್ಯಾರ್ಥಿ ಜೀವನದಲ್ಲಿ ಶಿಕ್ಷಣದ ಜೊತೆ ಕ್ರೀಡೆಗಳಲ್ಲಿ ಸಕ್ರಿಯವಾಗಿ ತೊಡಗಿಕೊಂಡು ಭವಿಷ್ಯದಲ್ಲಿ ರಾಜ್ಯ, ರಾಷ್ಟ್ರಮಟ್ಟದ ಕ್ರೀಡಾಪಟುಗಳಾಗಿ ಹೊರಹೊಮ್ಮಬೇಕು ಎಂದರು.

ಜಗಳೂರು ವಿಧಾನಸಭಾ ಕ್ಷೇತ್ರದ ಅರಸೀಕೆರೆ ಹೋಬಳಿಯು ಸರ್ಕಾರ ಸಹಕಾರ ಮತ್ತು ಶಾಸಕರ ಕಾಳಜಿಯಿಂದ 15 ಲಕ್ಷ ರೂ. ವೆಚ್ಚದಲ್ಲಿ ಸಿಸಿ ರಸ್ತೆ, ಮೂಲ ಸೌಕರ್ಯಗಳ ಅಭಿವೃದ್ಧಿಗೆ ಶ್ರಮಿಸಿದ್ದಾರೆ ಎಂದು ತಿಳಿಸಿದರು.

ಗ್ರಾಮದಲ್ಲಿ ಮೂರು ದಿನಗಳ ಕಾಲ ನಡೆದ ಕಬಡ್ಡಿ ಕ್ರೀಡೆಯಲ್ಲಿ 25 ತಂಡಗಳು ಭಾಗವಹಿಸಿದ್ದವು.

ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಂಜುನಾಥ ಸ್ವಾಮಿ, ವಿಎಸ್‌ಎಸ್‌ಎನ್ ಅಧ್ಯಕ್ಷ ಕೆಂಚಣ್ಣ, ಮುಖಂಡರಾದ ಹನುಮಂತಪ್ಪ, ನಾಗರಾಜ್, ನಂದೆಪ್ಪ, ಶಿವಾನಂದಗೌಡ್ರು, ಹಾಲಪ್ಪ, ಮಲ್ಲಾನಾಯ್ಕ, ರಾಜನಾಯ್ಕ, ಬಾಲೇನಹಳ್ಳಿ ಕೆಂಚನಗೌಡ ಸೇರಿದಂತೆ, ಮತ್ತಿತರರು ಇದ್ದರು.

# ಸೋಂಕು ಏರಿಳಿತ ಸಾಮಾನ್ಯ

**(1ನೇ ಪುಟದಿಂದ)** ಲಹರಿಯ ತಿಳಿಸಿದ್ದಾರೆ.

ಇನ್ನೂ ಕೆಲ ನಗರಗಳು ಹಾಗೂ ರಾಜ್ಯಗಳಲ್ಲಿ ಮುಂದಿನ ತಿಂಗಳುಗಳಲ್ಲಿ ಸೋಂಕು ಹೆಚ್ಚಾಗಬಹುದು. ಆದರೆ, ಇದು ಹೊಸ ಅಲೆ ಎಂದು ಅವಸರದ ತೀರ್ಮಾನಕ್ಕೆ ಬರಬಾರದು ಎಂದವರು ತಿಳಿಸಿದ್ದಾರೆ. ಬ್ರಿಟನ್ ಕೇವಲ ಆರು ತಿಂಗಳಲ್ಲಿ ಮೂರು ಅಲೆಗಳನ್ನು ಕಂಡಿದೆ. ಹೀಗಾಗಿ ಕೊರೊನಾ ಅಲೆಗಳ ಎಣಿಕೆ ನಿಲ್ಲಿಸುವುದೇ ಉತ್ತಮ ಎಂದು ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಹೆಲ್ತ್‌ನ ಸಾಂಕ್ರಾಮಿಕ ರೋಗಗಳ ಪರಿಣಿತ ಗಿರಿಧರ್ ಆರ್. ಬಾಬು ತಿಳಿಸಿದ್ದಾರೆ. ಪರೀಕ್ಷೆಯ ಪ್ರಮಾಣ, ಸೋಂಕಿನ ವ್ಯಾಖ್ಯಾನ ಸೇರಿದಂತೆ ಹಲವಾರು ಅಂಶಗಳಿಂದ ಅಲೆಗಳು ನಿರ್ಧಾರವಾಗುತ್ತವೆ. ಪ್ರತಿ ಅಲೆ ಬಂದಾಗ ಸೂಕ್ತ ಪರೀಕ್ಷೆ ನಡೆಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಎಂದವರು ತಿಳಿಸಿದ್ದಾರೆ.

# ಕಾಶ್ಮೀರ : ಮೂವರು ಉಗ್ರರು ಹತ

**(1ನೇ ಪುಟದಿಂದ)** ವರ್ಷದಲ್ಲಿ ಹತರಾದ ಉಗ್ರರ ಸಂಖ್ಯೆ 99ಕ್ಕೆ ಏರಿಕೆಯಾಗಿದೆ.

ಪುಲ್ವಾಮಾದ ಡ್ರಬ್ಗಾಮ್ ಹಳ್ಳಿಯಲ್ಲಿ ಉಗ್ರರು ಇರುವ ಬಗ್ಗೆ ನಿರ್ದಿಷ್ಟ ಸುಳಿವು ದೊರೆತಿತ್ತು. ಶನಿವಾರ ಇಡೀ ಪ್ರದೇಶವನ್ನು ಭದ್ರತಾ ಸಿಬ್ಬಂದಿ ಸುತ್ತುವರೆದಿದ್ದವು. ಉಗ್ರರು ಮನಬಂದಂತೆ ಗುಂಡು ಹಾರಿಸಿದಾಗ, ಪ್ರತಿದಾಳಿ ನಡೆಸಬೇಕಾಯಿತು. ಆಗ ಮೂವರು ಉಗ್ರರು ಹತರಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಹತರಾದ ಉಗ್ರರನ್ನು ಪುಲ್ವಾಮಾದ ಜುನೈದ್ ಅಹಮದ್ ಶೀರ್ಗೊಜ್ರಿ, ಡ್ರಬ್ಗಾಮ್‌ನ ಫಾಜಿಲ್ ನಜೀರ್ ಭಟ್ ಹಾಗೂ ಇರ್ಫಾನ್ ಅಹಮದ್ ಮಲಿಕ್ ಎಂದು ಗುರುತಿಸಲಾಗಿದೆ.

# ಗಂಗಾಕಲ್ಯಾಣ ಯೋಜನೆಯಡಿಯಲ್ಲಿ ಸಾಮಗ್ರಿ ವಿತರಿಸಿದ ಶಾಸಕ ಕರುಣಾಕರ ರೆಡ್ಡಿ



**ಹರಪನಹಳ್ಳಿ**

ಹರಪನಹಳ್ಳಿ, ಜೂ.12- 2018-19ನೇ ಸಾಲಿನ ಆದಿಜಾಂಬವ ನಿಗಮ 23, ಅಂಬೇಡ್ಕರ್ ನಿಗಮದಿಂದ 4 ಸೇರಿ ಒಟ್ಟು 27 ಫಲಾನುಭವಿಗಳಿಗೆ ಗಂಗಾಕಲ್ಯಾಣ ಯೋಜನೆಯ ಅಡಿಯಲ್ಲಿ ಒಟ್ಟು 3.5 ಲಕ್ಷ ಸಹಾಯ ಧನದಲ್ಲಿ ಕೊಳವೆ ಬಾವಿಯ ಸಾಮಗ್ರಿಗಳನ್ನು ನೀಡಲಾಗಿದೆ ಎಂದು ಶಾಸಕ ಜಿ. ಕರುಣಾಕರ ರೆಡ್ಡಿ ಹೇಳಿದರು.

ಪಟ್ಟಣದ ಬಾಬು ಜಗಜೀವನರಾಂ ಭವನದ ಆವರಣದಲ್ಲಿ ಗಂಗಾ ಕಲ್ಯಾಣ ಯೋಜನೆಯ ಅಡಿಯಲ್ಲಿ ಆಯ್ಕೆಯಾದ ಫಲಾನುಭವಿಗಳಿಗೆ ಕೊಳವೆ ಬಾವಿ ಸಾಮಾಗ್ರಿಗಳ್ನು ವಿತರಿಸಿ ಮಾತನಾಡಿದರು.

ಫಲಾನುಭವಿಗಳಿಗೆ ಕೊರೆಸಿರುವ ಕೊಳವೆ ಬಾವಿ, ಮೋಟಾರ್ ಪಂಪ್‌ಸೆಟ್, ವಿದ್ಯುತ್ ಸಂಪರ್ಕವನ್ನು ಈ ಯೋಜನೆಯಲ್ಲಿ ಫಲಾನುಭವಿಗೆ 3.5 ಲಕ್ಷ ನೀಡಲಾಗುತ್ತಿದ್ದು, ಒಂದು ವೇಳೆ ಆಳದಲ್ಲಿ ನೀರು ದೊರೆತು ಹೆಚ್ಚಿನ ಹಣ ಖರ್ಚಾದಲ್ಲಿ ಫಲಾನುಭವಿಗಳಿಗೆ ನಿಗಮದಿಂದ ಸಾಲವನ್ನು ಸಹಾಯಧನದ ಅಡಿಯಲ್ಲಿ ನೀಡಲಾಗುವುದು ಎಂದರು.

ಸ್ಥಳೀಯ ಪುರಸಭೆ ಅಧ್ಯಕ್ಷರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಮುಂದಿನ ಅಧ್ಯಕ್ಷರ ಆಯ್ಕೆ ಬಗ್ಗೆ ಪ್ರತಿಕ್ರಿಯಿಸಿದ ಅವರು, ಕಾದು ನೋಡಿ ಎಂದು ನಿರ್ಗಮಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ಕಣಿವಿಹಳ್ಳಿ ಮಂಜುನಾಥ, ಆರ್. ಲೋಕೇಶ್, ಶಿರಗಾನಹಳ್ಳಿ ವಿಶ್ವನಾಥ, ಎಂ. ಮಲ್ಲೇಶ್, ನಾಗರಾಜ ಉಪಸ್ಥಿತರಿದ್ದರು.

# ವಾಯುಪಡೆಯಿಂದ ವಿಮಾನಗಳ ಖರೀದಿ

**(1ನೇ ಪುಟದಿಂದ)** ಭಾರತದಲ್ಲೇ ಉತ್ಪಾದಿಸಲಾಗುವುದು.

ಭಾರತೀಯ ಕಂಪನಿಗಳು ವಿದೇಶಿ ಪೂರೈಕೆದಾರರ ಜೊತೆ ಸಹಭಾಗಿತ್ವ ಹೊಂದುವ ಮೂಲಕ ದೇಶದಲ್ಲಿ ವಿಮಾನಗಳ ಉತ್ಪಾದನೆಗೆ ಉತ್ತೇಜನ ನೀಡಲು ವಾಯುಪಡೆ ಯೋಜಿಸಿದೆ.

114 ಬಹುಪಾತ್ರ ನಿರ್ವಹಣೆಯ ವಿಮಾನಗಳ ಖರೀದಿ ಸಂದರ್ಭದಲ್ಲಿ ಭಾರತದಲ್ಲೇ ಉತ್ಪಾದನೆಗೆ ಉತ್ತೇಜನ ನೀಡುವ ಬಗ್ಗೆ ವಾಯುಪಡೆಯ ಇತ್ತೀಚಿನ ಸಭೆಗಳಲ್ಲಿ ಚರ್ಚಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಈ ಯೋಜನೆಯ ಅನ್ವಯ ಆರಂಭದಲ್ಲಿ 18 ವಿಮಾನಗಳನ್ನು ಆಮದು ಮಾಡಿಕೊಳ್ಳಲಾಗುವುದು. ಮುಂದಿನ 36 ವಿಮಾನಗಳನ್ನು ಭಾರತದಲ್ಲೇ ಉತ್ಪಾದಿಸಲಾಗುವುದು. ಇದಕ್ಕಾಗಿ ವಿದೇಶಿ ಹಾಗೂ ಭಾರತೀಯ ಹಣದಲ್ಲಿ ಪಾವತಿ ಮಾಡಲಾಗುವುದು.

ಕೊನೆಯ 60 ವಿಮಾನಗಳ ಉತ್ಪಾದನೆಯ ನಿರ್ವಹಣೆ ಬಹುತೇಕವಾಗಿ ಭಾರತೀಯ ಸಹಭಾಗಿಗಳದ್ದಾಗಿರಲಿದೆ. ಸರ್ಕಾರ ಇದಕ್ಕೆ ಭಾರತೀಯ ಹಣದಲ್ಲೇ ಪಾವತಿ ಮಾಡಲಿದೆ ಎಂದು ಮೂಲಗಳು ತಿಳಿಸಿವೆ.

ಸರ್ಕಾರದ ಈ ಕ್ರಮದಿಂದಾಗಿ ಪೂರೈಕೆದಾರರು ಶೇ.60ರ ಮೇಕ್ ಇನ್ ಇಂಡಿಯಾ ಷರತ್ತನ್ನು ಈಡೇರಿಸಲು ಸಾಧ್ಯವಾಗಲಿದೆ.

ಈ ಕುರಿತು ಕರೆಯಲಾಗುವ ಟೆಂಡರ್‌ನಲ್ಲಿ ಬೋಯಿಂಗ್, ಲಾಕ್‌ಹೀಡ್ ಮಾರ್ಟಿನ್, ಸಾಬ್, ಮಿಗ್, ಇರ್ಕುಟ್ ಕಾರ್ಪೊರೇಷನ್ ಹಾಗೂ ಡಸಾಲ್ಟ್ ಏವಿಯೇಷನ್‌ಗಳು ಭಾಗಿಯಾಗುವ ನಿರೀಕ್ಷೆ ಇದೆ.

ಸರ್ಕಾರ ಇತ್ತೀಚೆಗೆ 36 ರಫೇಲ್ ವಿಮಾನಗಳನ್ನು ತುರ್ತು ಆದೇಶದ ಮೂಲಕ ಖರೀದಿಸಿತ್ತು. ಆದರೆ, ದೇಶಕ್ಕೆ ಇನ್ನಷ್ಟು ವಿಮಾನಗಳ ಅಗತ್ಯವಿದೆ.

ಕಳೆದ ವರ್ಷ ಫೆಬ್ರವರಿಯಲ್ಲಿ ವಾಯುಪಡೆಯು 73 ತೇಜಸ್ ಮಾರ್ಕ್-1ಎ ಸಮರ ವಿಮಾನಗಳ ಖರೀದಿಗೆ ಆದೇಶ ಹೊರಡಿಸಿತ್ತು. ಹೆಚ್.ಎ.ಎಲ್. ಮೂಲಕ ಈ ವಿಮಾನಗಳನ್ನು 46 ಸಾವಿರ ಕೋಟಿ ರೂ.ಗಳಿಗೆ ಖರೀದಿಸಲಾಗುತ್ತಿದೆ. ಇವು 2024ರಿಂದ 2028ರ ನಡುವೆ ಪೂರೈಕೆಯಾಗುವ ನಿರೀಕ್ಷೆ ಇದೆ.

# ಉಕ್ರೇನ್

**ಉಕ್ರೇನ್ ಯುದ್ಧ ಕುರಿತಂತೆ...**

ಧರೆಯ
ದೊರೆಯಾಗುವ
ಉನ್ಮಾದ
ಆಕ್ರಮಣ
ಪರಾಕ್ರಮಣಗಳ ಆರ್ಭಟ
ನೆತ್ತರು ಚಿಮ್ಮಿ ರಂಗೇರಿದ ರಣಾಂಗಣ
ಹೊಗೆ ಬಿಡುವ ಕ್ಷಿಪಣಿ ಟ್ಯಾಂಕರ್‌ಗಳ
ಜ್ವಾಲೆಗೆ ಕವಿದು ನಿಂತ ಕಾರ್ಮೋಡ

ಬೆನ್ನಟ್ಟಿ ಬರುವ ಶತ್ರುವಿನ ಸೈನ್ಯ
ಕೆಂಡಕಾರುವ ಬಾಂಬ್ಗಳು
ನಿಂತರೆ ಬೂದಿಯಾಗುವ ದೇಹ
ಅವಿತುಕೊಳ್ಳಲು ಹಪ ಹಪಿಸುವ ಜೀವಗಳು

ಕುಸಿಯುತ್ತಿರುವ ಭೂಮಿ
ಗದ್ದಲಲ್ಲಿ ಗೌಣವಾದ ಆಕಾಶ
ನಾಯಕರೋ ಸೈನಿಕರೋ ಸೇವಕರೋ
ಎದೆ ಸೆಟೆದು ಬಂದೂಕಿಗೆ ಎದೆಯೊಡ್ಡಿ
ನಿಂತರು


ಬಾಲೆಯ ಕಣ್ಣೀರ ಹನಿ
ಹಸಿವಿನ ಒಡಲ ದನಿ
ಕೇಳುವ ಕರ್ಣಗಳು ಕಿವುಡು
ಹಸಿರ ನೆಲವೆಲ್ಲ ನೆತ್ತರಿನ ನರ್ತನ

ದೇಶದ ಗಡಿಯೋ
ಮಾನವೀಯತೆ ಗುಡಿಯೋ
ಕಟ್ಟೆಯೊಡೆದಿದೆ
ಯುದ್ಧೋನ್ಮಾದ ನಿಲ್ಲಿಸುವ
ಕೈಗಳು ಸೋತಿವೆ

ಲಾಭ ನಷ್ಟದ ಲೆಕ್ಕಾಚಾರ
ಕೀರ್ತಿ ಪ್ರತಿಷ್ಠೆಗಳ ಗುಣಕಾರ
ಭಾಗದ ಭಾಗಕ್ಕಾಗಿ
ಮಾನವೀಯತೆ ಶೂನ್ಯವಾಗಿದೆ ..

- ಬಸವರಾಜ ಕರುವಿನ, ಬಸವನಾಳು

# ದೇವರಾಜ್‌ಗೆ ರೆಡ್ ಕ್ರಾಸ್ ಶ್ರದ್ಧಾಂಜಲಿ



ದಾವಣಗೆರೆ, ಜೂ.12- ಕಳೆದ ವಾರ ನಿಧನರಾದ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಕಾರ್ಯದರ್ಶಿಯಾಗಿ ದೀರ್ಘ ಸೇವೆ ಸಲ್ಲಿಸಿದ್ದ ಕೆ. ಎಸ್. ದೇವರಾಜ್ ಅವರಿಗೆ ರೆಡ್ ಕ್ರಾಸ್ ಸಂಸ್ಥೆ ಶ್ರದ್ಧಾಂಜಲಿ ಸಲ್ಲಿಸಿದೆ.

ಆಡಳಿತ ಮಂಡಳಿ ಸಭೆ ನಡೆದು, ದೇವರಾಜ್ ಅವರ ಆತ್ಮಕ್ಕೆ ಚಿರಶಾಂತಿ ಕೋರಲಾಯಿತು. ಸಭಾಪತಿ ಡಾ. ಎ. ಎಂ. ಶಿವಕುಮಾರ್, ಉಪಸಭಾಪತಿ ಗೌಡ್ರು ಚನ್ನಬಸಪ್ಪ, ಗೌರವ ಕಾರ್ಯದರ್ಶಿ ಸಿ.ಎ. ಉಮೇಶ್ ಶೆಟ್ಟಿ, ಅನಿಲ್ ಬಾರೆಂಗಳ್, ಡಿ.ಎಸ್. ಸಾಗರ್, ರಾಜ್ಯ ಸಮಿತಿ ಸದಸ್ಯ ಡಿ. ಎಸ್. ಸಿದ್ದಣ್ಣ, ನಿರ್ದೇಶಕರುಗಳಾದ ಆನಂದ ಜ್ಯೋತಿ, ಮಹಮ್ಮದ್ ಇನಾಯತ್‌ಉಲ್ಲಾ, ಡಿ.ಎನ್. ಶಿವಾನಂದ, ಎ.ಜೆ. ರವಿಕುಮಾರ್, ಕೆ.ಕೆ. ನಾಗರಾಜ್, ವಸಂತರಾಜು, ಶ್ರೀಕಾಂತ್ ಬಗರೆ, ಕುಮಾರ್, ಪೃಥ್ವಿರಾಜ್ ಬಾದಾಮಿ, ನರೇಂದ್ರಪ್ರಕಾಶ್, ಟಿ. ಕರಿಬಸಪ್ಪ ಇವರುಗಳು ಮೃತರು ಸಂಸ್ಥೆಗೆ ನೀಡಿದ ಸೇವೆಯನ್ನು ಸ್ಮರಿಸಿದರು.

ಮೃತರ ಗೌರವಾರ್ಥ ಮರಣೋತ್ತರವಾಗಿ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ 'ಎಕ್ಸಲೆನ್ಸ್ ಅವಾರ್ಡ್' ನೀಡಲು ಮತ್ತು ಮೃತರ ಭಾವಚಿತ್ರವನ್ನು ಸಂಸ್ಥೆಯ ಕಚೇರಿಯಲ್ಲಿ ಹಾಕಲು ನಿರ್ಧರಿಸಲಾಯಿತು.

# ಮತ ಯಂತ್ರಗಳು ಸಜ್ಜಾಗಿಲ್ಲ

**(1ನೇ ಪುಟದಿಂದ)** ಮತ ಯಂತ್ರವನ್ನು ಪ್ರದರ್ಶಿಸಿತ್ತು. ಮೇ 1982ರಲ್ಲಿ ಮೊದಲ ಬಾರಿಗೆ ಕೇರಳ ವಿಧಾನಸಭೆಯ ಚುನಾವಣೆಯಲ್ಲಿ ಮತ ಯಂತ್ರ ಬಳಸಲಾಗಿತ್ತು. ಆದರೆ, ಮತ ಯಂತ್ರಗಳ ಬಳಕೆಗೆ ಸಂಬಂಧಿಸಿದಂತೆ ನಿರ್ದಿಷ್ಟ ಕಾನೂನು ಇಲ್ಲದ ಕಾರಣ, ಚುನಾವಣೆಯನ್ನು ಸುಪ್ರೀಂ ಕೋರ್ಟ್ ರದ್ದುಗೊಳಿಸಿತ್ತು.

ಈ ಹಿನ್ನೆಲೆಯಲ್ಲಿ 1989ರಲ್ಲಿ ಜನಪ್ರತಿನಿಧಿ ಕಾಯ್ದೆಗೆ ತಿದ್ದುಪಡಿ ತರಲು ಸಂಸತ್ತು ಒಪ್ಪಿಗೆ ನೀಡಿತ್ತು.

ಆದರೂ, ಮತ ಯಂತ್ರಗಳ ಬಳಕೆಗೆ ಸರ್ವಸಮ್ಮತಿ 1998ರಲ್ಲಿ ರೂಪುಗೊಂಡಿತ್ತು. ಮಧ್ಯಪ್ರದೇಶ, ರಾಜಸ್ಥಾನ ಹಾಗೂ ದೆಹಲಿಗಳ 25 ವಿಧಾನಸಭೆಗಳಲ್ಲಿ ಮತ ಯಂತ್ರಗಳನ್ನು ಮೊದಲು ಬಳಸಲಾಗಿತ್ತು. 2001ರ ಮೇ ತಿಂಗಳಲ್ಲಿ ತಮಿಳುನಾಡು, ಕೇರಳ, ಪುದುಚೆರಿ ಹಾಗೂ ಪಶ್ಚಿಮ ಬಂಗಾಳಗಳ ವಿಧಾನಸಭಾ ಚುನಾವಣೆಗೆ ಮತ ಯಂತ್ರಗಳನ್ನು ಬಳಸಲಾಗಿತ್ತು. ಆನಂತರದಲ್ಲಿ ಪ್ರತಿಯೊಂದು ವಿಧಾನಸಭಾ ಚುನಾವಣೆಗೂ ಮತ ಯಂತ್ರ ಬಳಸಲಾಗಿತ್ತು.

2004ರ ಲೋಕಸಭಾ ಚುನಾವಣೆಯಲ್ಲಿ ಎಲ್ಲಾ 543 ಲೋಕಸಭಾ ಕ್ಷೇತ್ರಗಳಲ್ಲಿ ಹತ್ತು ಲಕ್ಷಕ್ಕೂ ಹೆಚ್ಚು ಮತ ಯಂತ್ರಗಳನ್ನು ಬಳಸಲಾಗಿತ್ತು.

# ರೋಗ ಬರುವುದಕ್ಕಿಂತ ಮೊದಲೇ ಗಮನ ಹರಿಸಿ

**(1ನೇ ಪುಟದಿಂದ)** ಆರೋಗ್ಯ ಸುಧಾರಿಸುತ್ತದೆ ಎಂದರು. ತೆಗ್ಗಿನ ಮಠದ ವತಿಯಿಂದ ಇಂತಹ ಹಲವಾರು ಕಾರ್ಯಕ್ರಮಗಳನ್ನು ಮಾಡುವ ಮೂಲಕ ಮಠದಿಂದ ಅನೇಕ ಸಮಾಜಮುಖಿ ಕಾರ್ಯಗಳನ್ನು ಮಾಡಲಾಗುತ್ತದೆ ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಮುಖೇಶ್ ಚೌಧರಿ, ಡಾ. ರಾಕೇಶ್ವರ್, ಆರ್.ನಾಗೇಂದ್ರರಾವ್. ಪ್ರಾಂಶುಪಾಲ ಅರುಣಕುಮಾರ್, ಮಡಿವಾಳಸ್ವಾಮಿ ಸೇರಿದಂತೆ ಇತರರು ಇದ್ದರು.

# ರಂಗ ಶಿಕ್ಷಣ ಡಿಪ್ಲೋಮಾಕ್ಕೆ ಅರ್ಜಿ ಆಹ್ವಾನ

ದಾವಣಗೆರೆ, ಜೂ.12-ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದಿರುವ ರಂಗಶಿಕ್ಷಣ ಡಿಪ್ಲೋಮಾಕ್ಕೆ ಆಸಕ್ತರಿಂದ ಅರ್ಜಿ ಆಹ್ವಾನಿಸಲಾಗಿದೆ.

ಈ ಶಿಕ್ಷಣದ ತರಬೇತಿ ಅವಧಿ ಒಂದು ವರ್ಷ. ಕನಿಷ್ಠ ವಿದ್ಯಾರ್ಹತೆ ಎಸ್.ಎಸ್.ಎಲ್.ಸಿ ಯಾಗಿದ್ದು, ಪದವೀಧರರಿಗೆ ಆದ್ಯತೆ ಕೊಡಲಾಗುವುದು. ತರಬೇತಿ ಅವಧಿಯಲ್ಲಿ ಊಟ ಮತ್ತು ವಸತಿ ವ್ಯವಸ್ಥೆ ಇರುತ್ತದೆ. ಕರ್ನಾಟಕ ಹಾಗೂ ಭಾರತದ ರಂಗ ತಜ್ಞರು ಮತ್ತು ಅತಿಥಿ ಉಪನ್ಯಾಸಕ ರಿಂದ ತರಗತಿಗಳು ನಡೆಯಲಿವೆ. ಪ್ರವೇಶ ಅರ್ಜಿಗಳನ್ನು ರಂಗಶಾಲೆಯ ವೆಬ್‌ಸೈಟ್ www.theatreschoolsanehalli.orgನಲ್ಲಿ ಪ್ರವೇಶ ಅರ್ಜಿಯನ್ನು ಡೌನ್‌ಲೋಡ್ ಮಾಡಿ, ಇದೇ ದಿನಾಂಕ 30 ರ ಒಳಗಾಗಿ ಅರ್ಜಿಯನ್ನು ರಂಗಶಾಲೆಗೆ ಸಲ್ಲಿಸಬಹುದಾಗಿರುತ್ತದೆ ಹಾಗೂ ಜುಲೈ ತಿಂಗಳ 6, 7 ಮತ್ತು 8 ರಂದು ಸಂದರ್ಶನ ನಡೆಯಲಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 9448398144-9482942394 ಯನ್ನು ಸಂಪರ್ಕಿಸಬಹುದು.

# ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿಗೆ ನ್ಯಾಕ್ ಸಂಸ್ಥೆಯಿಂದ ಬಿ++ ಗ್ರೇಡ್

ದಾವಣಗೆರೆ, ಜೂ.12- ನಗರದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿಗೆ ನ್ಯಾಕ್ ಸಂಸ್ಥೆಯಿಂದ ಬಿ++ ಗ್ರೇಡ್ ಮಾನ್ಯತೆ ಲಭಿಸಿದೆ.

ದಾವಣಗೆರೆ ಜಿಲ್ಲೆಯ ಸರ್ಕಾರಿ ಕಾಲೇಜುಗಳಲ್ಲೇ ಬಿ++ ನ್ಯಾಕ್ ಮಾನ್ಯತೆ ಪಡೆದ ಮೊದಲ ಸರ್ಕಾರಿ ಕಾಲೇಜು ಇದಾಗಿದೆ. ಕಾಲೇಜು ಈ ಹಿಂದೆ ಮೊದಲನೆಯ ಬಾರಿ ನ್ಯಾಕ್ ಗ್ರೇಡ್‌ಗೆ ಒಳಪಟ್ಟಾಗ 2.46 ಸಿಜಿಪಿಎಯೊಂದಿಗೆ ಬಿ ಗ್ರೇಡ್ ಪಡೆದಿತ್ತು. ಪ್ರಸ್ತುತ 2021-22ನೇ ಶೈಕ್ಷಣಿಕ ಸಾಲಿನಲ್ಲಿ ನಮ್ಮ ಕಾಲೇಜು ಎರಡನೆಯ ಬಾರಿಗೆ ನ್ಯಾಕ್ ಮೌಲ್ಯ ಮಾಪನಕ್ಕೆ ಒಳಪಟ್ಟು 2.80 ಸಿಜಿಪಿಎಯೊಂದಿಗೆ ಬಿ ++ ಗ್ರೇಡ್ ಪಡೆದಿದೆ ಎಂದು ಕಾಲೇಜಿನ ಐಕ್ಯೂಎಸಿ ಸಂಚಾಲಕ ಡಾ. ಎಂ.ಪಿ. ಭೀಮಪ್ಪ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ನ್ಯಾಕ್ ಸಂಸ್ಥೆಯ ಡಾ. ಅವಿನಾಶ್ ತಿವಾರಿ, ಉಪಕುಲಪತಿಗಳು, ಮಧ್ಯಪ್ರದೇಶದ ಶಿವಾಜಿ ವಿಶ್ವವಿದ್ಯಾನಿಲಯ, ತಮಿಳುನಾಡಿನ ಡಾ. ಪಿ.ಎನ್. ಪ್ರೇಮಲತಾ ಮತ್ತು ಗುಜರಾತ್ ನ ಡಾ. ಸಂಗೀತಾ ಘಾಟೆ ಇವರನ್ನೊಳಗೊಂಡ ನ್ಯಾಕ್ ಪರಿಣಿತ ತಂಡವು ನಮ್ಮ ಕಾಲೇಜಿಗೆ ಭೇಟಿ ನೀಡಿ ಪರಿಶೀಲಿಸಿ ವರದಿ ನೀಡಿತ್ತು. ಕಾಲೇಜಿನಲ್ಲಿ ಕಲಾ, ವಿಜ್ಞಾನ, ವಾಣಿಜ್ಯ ಹಾಗೂ ಬಿಬಿಎ ವಿಭಾಗಗಳಿದ್ದು, ಒಟ್ಟಾರೆ ಫಲಿತಾಂಶ ಸರಾಸರಿ ಶೇ. 89ರಷ್ಟು ಇದೆ. 5 ರ್‍ಯಾಂಕ್ ಗಳನ್ನು ಪಡೆದಿದೆ. ದೈಹಿಕ ಶಿಕ್ಷಣ ಶಿಕ್ಷಕರನ್ನು ಹೊರತುಪಡಿಸಿ ಎಲ್ಲ ಬೋಧಕ ಹುದ್ದೆಗಳು ಭರ್ತಿಯಾಗಿವೆ. ಕಾಲೇಜು ಹೆಚ್ಚಿನ ಮೂಲಭೂತ ಸೌಕರ್ಯ ಹೊಂದಿದೆ. ನ್ಯಾಕ್ ಬಿ ಮಾನ್ಯತೆ ಲಭಿಸಿದಾಗಿನಿಂದ ಯುಜಿಸಿ ಅನುದಾನ ಪಡೆಯುತ್ತಿದೆ ಎಂದು ತಿಳಿಸಿದರು.

ಕಾಲೇಜಿಗೆ ನ್ಯಾಕ್ ಮಾನ್ಯತೆ ದೊರೆಯುವಲ್ಲಿ ಪೂರಕವಾಗಿ ಕಾಲೇಜು ಅಭಿವೃದ್ಧಿಗೆ ಸಹಕರಿಸಿದ ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷರು ಹಾಗೂ ದಾವಣಗೆರೆ ಶಾಸಕ ಎಸ್.ಎ. ರವೀಂದ್ರನಾಥ್, ಕಾಲೇಜು ಅಭಿವೃದ್ಧಿ ಸಮಿತಿಯ ಸರ್ವ ಸದಸ್ಯರು, ನಗರ ಪಾಲಿಕೆ ಸದಸ್ಯರುಗಳಾದ ವೀಣಾ ನಂಜಪ್ಪ, ಗೀತಾ ದಿಳ್ಯಪ್ಪ, ಜಿಲ್ಲಾಧಿಕಾರಿ, ಪಾಲಿಕೆಯ ಮೇಯರ್, ಸ್ಮಾರ್ಟ್‌ಸಿಟಿ ವ್ಯವಸ್ಥಾಪಕ ನಿರ್ದೇಶಕ ರವೀಂದ್ರ ಬಿ. ಮಲ್ಲಾಪುರ, ಕಾಲೇಜಿನ ಬೋಧಕ-ಬೋಧಕೇತರರಿಗೆ, ವಿದ್ಯಾರ್ಥಿ ವೃಂದಕ್ಕೆ ಕಾಲೇಜಿನ ಪ್ರಾಂಶುಪಾಲರಾದ ಎ. ಎಸ್. ಶೈಲಜಾ ಕೃತಜ್ಞತೆ ಸಲ್ಲಿಸಿದರು.

ಗೋಷ್ಠಿಯಲ್ಲಿ ಕಾಲೇಜಿನ ಐಕ್ಯೂಎಸಿ ಸಹ ಸಂಚಾಲಕ ಕೆ.ಎ. ಬಾಬು, ಅಧೀಕ್ಷಕ ಟಿ. ಶೇಷಪ್ಪ, ಹಿರಿಯ ಉಪನ್ಯಾಸಕ ಎನ್. ಶಿವರಾಜ್ ಇದ್ದರು.

# ಕಾಲೇಜು ದಿನ ನೆನಪಿಸಿದ 'ಸಮ್ಮಿಲನ'



ಕೊಟ್ಟೂರು, ಜೂ. 12 - ಪಟ್ಟಣದ ಕೊಟ್ಟೂರೇಶ್ವರ ಮಹಾವಿದ್ಯಾಲಯದಲ್ಲಿ 1962ರ ಮೊದಲ ಬ್ಯಾಚ್‌ನ ವಿದ್ಯಾರ್ಥಿಗಳು ಡಾ.ಎಚ್.ಜಿ.ರಾಜ್ ಆಡಿಟೋರಿಯಂ ನಲ್ಲಿ ಸ್ನೇಹ ಸಮ್ಮಿಲನ ಸಮಾರಂಭವನ್ನು ಆಯೋಜಿಸಿದ್ದರು.

ಸಭೆ ಉದ್ಘಾಟಿಸಿದ ಕಾಲೇಜು ಆಡಳಿತ ಮಂಡಳಿ ಅಧ್ಯಕ್ಷ ಸಿದ್ದರಾಮ ಕಲ್ಮಠ್ ಮಾತನಾಡಿ ದೇಶ-ವಿದೇಶಗಳಲ್ಲಿ ನೆಲೆಸಿರುವ ಹಳೆಯ ವಿದ್ಯಾರ್ಥಿಗಳು ತಾವು ಓದಿದ ಕಾಲೇಜ್ ಹಾಗೂ ಉಪನ್ಯಾಸಕರನ್ನು ಸ್ಮರಿಸಿ, ಸನ್ಮಾನಿಸಿದ್ದು ಸುವರ್ಣಾಕ್ಷರಗಳಲ್ಲಿ ಬರೆದಿಡಬಹುದಾದ ಕ್ಷಣ ಎಂದರು.

ಪ್ರಾಚಾರ್ಯ ಶಾಂತಮೂರ್ತಿ ಬಿ.ಕುಲಕರ್ಣಿ ಮಾತನಾಡಿ, ನಮ್ಮ ಕಾಲೇಜಿನ ಸುವರ್ಣ ಮಹೋತ್ಸವ ಆಚರಿಸುವ ಈ ಸಂದರ್ಭಕ್ಕೆ ಈ ಸ್ನೇಹ ಸಮ್ಮಿಲನ ಕಾರ್ಯಕ್ರಮದಿಂದ ಹೆಚ್ಚಿನ ಪ್ರೇರಣೆ ದೊರೆತಂತಾಯಿತು ಎಂದರು.

ಅಮೆರಿಕಾದ ನಿವಾಸಿ, ವಿಜ್ಞಾನಿ ಚಂದ್ರಶೇಖರಪ್ಪ ಮಾತನಾಡಿ, ಸ್ಥಾಪಕ ಪ್ರಾಚಾರ್ಯ ಎಸ್.ಎಂ.ಸಂಗನಬಸಯ್ಯ ಹಾಗೂ ಬೋಧಕ, ಬೋಧಕೇತರ ಸಿಬ್ಬಂದಿಯ ಶ್ರಮ ಹಾಗೂ ಪ್ರೋತ್ಸಾಹಗಳಿಂದ ನಾವು ಉನ್ನತ ಹುದ್ದೆಗಳನ್ನು ಅಲಂಕರಿಸಲು ಸಾಧ್ಯವಾಯಿತು ಎಂದು ಭಾವುಕತೆಯಿಂದ ಸ್ಮರಿಸಿದರು.

ಆಂಜನೇಯ, ಹರಾಳು ನಂಜಪ್ಪ, ಸಿ.ಎಚ್.ಎಂ.ಕೊಟ್ರೇಶ್ ಹಳೆಯ ನೆನಪುಗಳನ್ನು ಪರಸ್ಪರ ನೆನಪಿಸಿಕೊಂಡರು.

ಬೆಂಗಳೂರಿನ ರಾಮಕೃಷ್ಣ ಆಶ್ರಮದ ರಾಮಕೃಷ್ಣ ಗುರೂಜಿ ಆಶೀರ್ವಚನ ನೀಡಿದರು. ನಿವೃತ್ತ ಉಪನ್ಯಾಸಕರಾದ ಅಂಕದ್, ರಾಜಶೇಖರಪ್ಪ, ಸುರುಕೋಡ್, ಬಸವರಾಜ್ ಮಾತನಾಡಿದರು. ಆಡಳಿತ ಮಂಡಳಿ ಸದಸ್ಯರಾದ ಎಸ್.ಎಂ.ಗುರುಪ್ರಸಾದ್, ಅಡಕಿ ಮಂಜುನಾಥ್ ಪಾಲ್ಗೊಂಡಿದ್ದರು. ವಿರೂಪಾಕ್ಷಯ್ಯ ಸ್ವಾಗತಿಸಿದರು, ಹೊ.ಮ.ಪಂಡಿತಾರಾಧ್ಯ ನಿರೂಪಿಸಿದರು, ಡಾ. ತಿಮ್ಮಪ್ಪ ಪ್ರಾಸ್ತಾವಿಕ ಮಾತನಾಡಿದರು, ಕೈಲಾಶ್‌ನಾಥ್ ವಂದಿಸಿದರು.


ಆತ್ಮೀಯ ಗೆಳೆಯರಿಗೆ ಹುಟ್ಟುಹಬ್ಬದ ಶುಭಾಶಯಗಳು




ಇಂದು ತಮ್ಮ ಹುಟ್ಟುಹಬ್ಬದ ಸಂಭ್ರಮದಲ್ಲಿರುವ
ಆತ್ಮೀಯ ಗೆಳೆಯರಾದ
ಜಗಳೂರು ಪ್ರಥಮ ದರ್ಜೆ ಗುತ್ತಿಗೆದಾರರಾದ
ಶ್ರೀ ಎ.ಆರ್. ನಾಗರಾಜ್ ಗೌಡಗೊಂಡನಹಳ್ಳಿ
ಶ್ರೀ ರಾಮ್ ಅಸೋಸಿಯೇಟ್ಸ್ ಮಾಲೀಕರಾದ
ಶ್ರೀನಿವಾಸ್
ಅವರುಗಳಿಗೆ ಜನ್ಮದಿನದ ಹಾರ್ದಿಕ ಶುಭಾಶಯಗಳು.

✦ ಶ್ರೀನಿವಾಸ ದಾಸಕರಿಯಪ್ಪ ಗೆಳೆಯರ ಬಳಗ
✦ ಹ್ಯಾಪಿ ಫ್ರೆಂಡ್ಸ್ ಗ್ರೂಪ್, ವಿನೋಬನಗರ
✦ ಇಂಡಿಯನ್ ಕಾಫಿ ಬಾರ್ ಗೆಳೆಯರ ಬಳಗ, ಹಳೇ ಬಸ್ ನಿಲ್ದಾಣ
✦ ಟೀ ಲಾಂಚ್ ಗೆಳೆಯರ ಬಳಗ, ದಾವಣಗೆರೆ

Be safe stay home.

# ಶೋಷಿತ ಪರ ನಿಲ್ಲುವುದು ಮುಳ್ಳಿನ ಹಾಸಿಗೆಯಿದ್ದಂತೆ



ಲಂಬಾಣಿ ಸಮಾಜದ ಧರ್ಮಸಭೆಯಲ್ಲಿ ಬಾಡದ ಆನಂದರಾಜ್‌ಗೆ ಸನ್ಮಾನ ಸಮಾರಂಭದಲ್ಲಿ ಶ್ರೀ ಸೇವಾಲಾಲ್ ಸ್ವಾಮೀಜಿ

ದಾವಣಗೆರೆ, ಜೂ. 12- ಸಮಾಜದಲ್ಲಿ ಶೋಷಣೆಗೆ ಒಳಗಾಗಿರುವ ಸಮುದಾಯಗಳನ್ನು ಸಂಘಟಿಸುವ ಕೆಲಸ ಮುಳ್ಳಿನ ಹಾಸಿಗೆಯಿದ್ದಂತೆ. ಅಂತಹ ಕಷ್ಟದ ಕೆಲಸವನ್ನು ಎರಡು ದಶಕಗಳಿಂದ ಶೋಷಿತರ ಪರವಾಗಿ ನಿಂತಿರುವ ಹೋರಾಟಗಾರ ಬಾಡದ ಆನಂದರಾಜ್ ಅವರ ಸಾಮಾಜಿಕ ಸೇವೆ ನಿಜಕ್ಕೂ ಶ್ಲಾಘನೀಯ ಎಂದು ಚಿತ್ರದುರ್ಗದ ಬಂಜಾರ ಪೀಠಾಧ್ಯಕ್ಷರಾದ ಶ್ರೀ ಸರ್ದಾರ್ ಸೇವಾಲಾಲ್ ಸ್ವಾಮೀಜಿ ಹೇಳಿದರು.

ನಗರದ ಸರಸ್ವತಿ ಬಡಾವಣೆಯ ಶ್ರೀ ಸೇವಾಲಾಲ್ ಭವನದಲ್ಲಿ ಮೊನ್ನೆ ನಡೆದ ಬಂಜಾರ ಸಮುದಾಯದ ಗುರುಗಳ ಧರ್ಮಸಭೆಯಲ್ಲಿ ಬಾಡದ ಆನಂದರಾಜ್ ಅವರನ್ನು ಸನ್ಮಾನಿಸಿ ಶ್ರೀಗಳು ಮಾತನಾಡಿದರು.

ಬಂಜಾರ ಸಮಾಜದಂತಹ ಸಮುದಾಯಗಳ ಅಭಿವೃದ್ಧಿ ಶಿಕ್ಷಣ, ಸಂಘಟನೆ ಮತ್ತು ಹೋರಾಟಗಳಿಂದ ಮಾತ್ರ ಸಾಧ್ಯ. ಸಂವಿಧಾನ ಶಿಲ್ಪಿ ಅಂಬೇಡ್ಕರ್ ರವರ ಆಶಯದಂತೆ ನಾವುಗಳು ಬಾಳಬೇಕಾಗಿದೆ ಎಂದು ಶ್ರೀಗಳು ಆಶೀರ್ವಚನ ನೀಡಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಬಾಡದ ಆನಂದರಾಜ್ ಅವರು, ಯಾದವ ಸಮಾಜ ಮತ್ತು ಲಂಬಾಣಿ ಸಮಾಜಗಳು ಇತಿಹಾಸದಲ್ಲಿ ರಾಜರ ಆಡಳಿತ ಹೊಂದಿದ್ದ ಸಮುದಾಯಗಳು.

ಅದೇ ರೀತಿ ಯಾದವ ಕುಲತಿಲಕ ಶ್ರೀ ಕೃಷ್ಣನಿಗೆ ವಧು ನೀಡಿದ್ದು ಲಂಬಾಣಿ ಸಮಾಜ. ನಮ್ಮ - ನಿಮ್ಮ ನಡವಳಿಕೆಗಳಲ್ಲಿ ಕೂಡ ಅವಿನಾಭಾವ ಸಂಬಂಧಗಳಿವೆ ಎಂದು ಹೇಳುತ್ತಾ, ದೇಶದ ಶಕ್ತಿ ಕೇಂದ್ರವಾಗಿರುವ ರಾಜಕೀಯ ಕ್ಷೇತ್ರದಲ್ಲಿ ಶೋಷಿತ ವರ್ಗಗಳು ಮುಖ್ಯವಾಹಿನಿಗೆ ಬರಲು ಸತತ ಪ್ರಯತ್ನಪಡಬೇಕಾಗಿದೆ ಎಂದು ಕರೆ ನೀಡಿದರು.

ಸಭೆಯಲ್ಲಿ ಹಾತೀರಾಮ್ ಬಾವಾಜಿ ರಾಜ್ಯ ಬಂಜಾರ ಸಂಘದ ಅಧ್ಯಕ್ಷ ಧರ್ಮನಾಯ್ಕ್, ಪಾಲಿಕೆ ಸ್ಥಾಯಿ ಸಮಿತಿ ಅಧ್ಯಕ್ಷ ಮಂಜುನಾಯ್ಕ್, ಗುತ್ತಿಗೆದಾರ ವೆಂಕಟೇಶ್ ನಾಯ್ಕ್, ಲಂಬಾಣಿ ಸಮಾಜದ ಹಿರಿಯ ಮುಖಂಡ ಹಾಲೇಕಲ್ಲು ಚಂದ್ರನಾಯ್ಕ್, ಕುಬೇರನಾಯ್ಕ್, ಎಸ್.ಎಸ್. ನಾಯಕ್ ಉಪಸ್ಥಿತರಿದ್ದರು.

# ಸಂಕುಚಿತಗೊಳ್ಳುತ್ತಿರುವ ಕುಟುಂಬಗಳು, ಮರೆಯಾಗುತ್ತಿರುವ ಮೌಲ್ಯಗಳು

## ಸಿದ್ಧಗಂಗಾ ಪದವಿ ಪೂರ್ವ ಕಾಲೇಜಿನ ನಿರ್ದೇಶಕ ಡಾ. ಡಿ.ಎಸ್. ಜಯಂತ್ ವ್ಯಾಕುಲತೆ



ದಾವಣಗೆರೆ, ಜೂ. 12- ಕುಟುಂಬಗಳು ಸಂಕುಚಿತಗೊಳ್ಳುತ್ತಿದ್ದು, ಸಾಮಾಜಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳು ಮರೆಯಾಗುತ್ತಿದ್ದು, ಇಂತಹ ಬದಲಾದ ಪರಿಸ್ಥಿತಿಯಲ್ಲಿ ಮಕ್ಕಳಲ್ಲಿ ಮೌಲ್ಯ ಬಿತ್ತುವ ಅಗತ್ಯವಿದೆ ಎಂದು ಸಿದ್ಧಗಂಗಾ ಪದವಿ ಪೂರ್ವ ಕಾಲೇಜಿನ ನಿರ್ದೇಶಕ ಡಾ. ಡಿ. ಎಸ್. ಜಯಂತ್ ಹೇಳಿದರು.

ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್, ಶ್ರೀ ಸಿದ್ಧಗಂಗಾ ಮಕ್ಕಳ ಲೋಕ ಇವರ ಸಂಯುಕ್ತಾಶ್ರಯದಲ್ಲಿ ನಗರದ ಕುವೆಂಪು ಕನ್ನಡ ಭವನದಲ್ಲಿ ಕಳೆದ ವಾರ ಏರ್ಪಡಿಸಿದ್ದ ದತ್ತಿ ಉಪನ್ಯಾಸ, ಸಿದ್ಧಗಂಗಾ ಮಕ್ಕಳ ಲೋಕ ಸಾಂಸ್ಕೃತಿಕ ಸಂಸ್ಥೆಯ 14 ನೇ ವಾರ್ಷಿಕೋತ್ಸವ ಮತ್ತು ಮಕ್ಕಳ ಸಾಹಿತ್ಯೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪೋಷಕರ ಒತ್ತಡ ಮತ್ತು ಜಂಜಾಟದ ಬದುಕಿನ ಮಧ್ಯೆ ಮಕ್ಕಳು ಸಾಂಸ್ಕೃತಿಕ ಮತ್ತು ಸಾಮಾಜಿಕ ಮೌಲ್ಯಗಳನ್ನು ಮರೆಯುತ್ತಿದ್ದಾರೆ. ಇಂದಿನ ದಿನಮಾನಗಳಲ್ಲಿ ಟಿವಿಗಳಲ್ಲಿ ಈ ಹಿಂದೆ ಮಾನಸಿಕ ಬದಲಾವಣೆಯಾಗುವಂತಹ ಮೌಲ್ಯಯುತ ಧಾರಾವಾಹಿಗಳು, ನೀತಿ ಕಥೆಗಳು ಪ್ರಸಾರವಾಗುತ್ತಿದ್ದವು. ಆದರೆ ಈಗ ಅಂತಹ ಕಾರ್ಯಕ್ರಮಗಳು ಬಿತ್ತರಗೊಳ್ಳುತ್ತಿಲ್ಲ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

ಜೀವನದಲ್ಲಿ ನಿರ್ದಿಷ್ಟ ಗುರಿ ಮತ್ತು ಛಲ ಇದ್ದರೆ ಯಶಸ್ಸು ಸಾಧ್ಯ. ಇದಕ್ಕೆ ಸಿದ್ಧಗಂಗಾ ಮಕ್ಕಳ ಲೋಕವೇ ಸಾಕ್ಷಿ. ಕೆ.ಎನ್. ಸ್ವಾಮಿ ಅವರ 14 ವರ್ಷಗಳ ನಿರಂತರ ಪರಿಶ್ರಮದಿಂದ ಮಕ್ಕಳು ಸಾಧನೆ ಮಾಡಲು ಸಾಧ್ಯವಾಗಿದೆ ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ಪಾಲಿಕೆ ಮಾಜಿ ಉಪ ಮೇಯರ್ ಬಿ. ಲೋಕೇಶ್ ಮಾತನಾಡಿ, ಮೊಬೈಲ್ ಮತ್ತು ತಂತ್ರಜ್ಞಾನದ ಅತಿಯಾದ ಬಳಕೆಯಿಂದಾಗಿ ಸಂಸ್ಕೃತಿ, ಮೌಲ್ಯಗಳು ಕಡಿಮೆಯಾಗುತ್ತಿವೆ. ಸಾಂಸ್ಕೃತಿಕ ಮೌಲ್ಯಗಳನ್ನು ಉಳಿಸಿಕೊಂಡು ಹೋಗುವ ಸವಾಲುಗಳು ನಮ್ಮ ಎದುರಿಗಿವೆ. ಮಕ್ಕಳಿಗೆ ಆಗಸದ ಚಂದ್ರನನ್ನು ತೋರಿಸಿ ಊಟ ಮಾಡಿಸುವ ಕಾಲವಿತ್ತು. ಆದರೀಗ ಮೊಬೈಲ್ ತೋರಿಸಿ ಊಟ ಮಾಡಿಸುವ ಪರಿಸ್ಥಿತಿ ಬಂದಿದೆ. ಇಂತಹ ಮಕ್ಕಳಿಂದ ಮೌಲ್ಯಗಳನ್ನು ನಿರೀಕ್ಷಿಸಲು ಸಾಧ್ಯವಿಲ್ಲ ಎಂದು ಹೇಳಿದರು.

ಪಾಶ್ಚಾತ್ಯರ ಪ್ರಭಾವದಿಂದಾಗಿ ಭಾರತೀಯ ಸಂಸ್ಕೃತಿ ಕ್ಷೀಣಿಸುತ್ತಿದೆ. ಇದನ್ನು ಉಳಿಸಿ, ಬೆಳೆಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನಗಳಾಗಬೇಕಾಗಿದೆ ಎಂದರು.

ಆವರಗೊಳ್ಳ ಪುರವರ್ಗ ಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಮಾತನಾಡಿ, ತುಮಕೂರು ಸಿದ್ಧಗಂಗಾ ಮಠ ನಾಡಿನ ಮಕ್ಕಳಿಗೆ ಉಚಿತ ಶಿಕ್ಷಣ, ವಸತಿ, ಊಟ ನೀಡುತ್ತಿರುವುದು ಅತ್ಯಂತ ಶ್ಲಾಘನೀಯ ಕಾರ್ಯ. ಅದರಂತೆ ದಾವಣಗೆರೆ ಶ್ರೀ ಸಿದ್ಧಗಂಗಾ ಮಕ್ಕಳ ಲೋಕದಲ್ಲಿ 80 ಮಕ್ಕಳಿದ್ದು ಸಂಗೀತ, ಸಾಹಿತ್ಯ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಉಚಿತ ಸೇವೆ ಮಾಡುತ್ತಿರುವುದು ಸಂತೋಷದ ಸಂಗತಿ ಎಂದು ಶ್ಲಾಘಿಸಿದರು.

ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಶ್ರೀಮತಿ ಸುಮತಿ ಜಯಪ್ಪ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ, ಚುಟುಕು ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ರಾಜಶೇಖರ್ ಗುಂಡಗಟ್ಟಿ, ಮಕ್ಕಳ ಸಾಹಿತ್ಯ ವೇದಿಕೆ ಜಿಲ್ಲಾಧ್ಯಕ್ಷೆ ಶ್ರೀಮತಿ ಚಂದ್ರಶೇಖರ ಅಡಿಗ ಮತ್ತಿತರರು ಉಪಸ್ಥಿತರಿದ್ದರು.

ನಿವೃತ್ತ ಉಪನ್ಯಾಸಕರಾದ ಶ್ರೀಮತಿ ಮಂಜುಳ ಮಂಜಪ್ಪ 'ಶ್ರೀ ಸ್ವಾಮಿ ವಿವೇಕಾನಂದರ ಆದರ್ಶಗಳು ಹಾಗೂ ನಿವೃತ್ತ ಅಧ್ಯಾಪಕಿ ವಾಗ್ದೇವಿ ಸಮಾಜ ಸೇವೆ' ಕುರಿತು ದತ್ತಿ ಉಪನ್ಯಾಸ ನೀಡಿದರು.

ಶ್ರೀಮತಿ ರುದ್ರಾಕ್ಷಿಬಾಯಿ ಪುಟ್ಟಾನಾಯ್ಕ ಪ್ರಾರ್ಥಿಸಿದರು. ಮಕ್ಕಳ ಲೋಕದ ಸಂಸ್ಥಾಪಕ ಕೆ.ಎನ್. ಸ್ವಾಮಿ ಸ್ವಾಗತಿಸಿದರು. ಯುವ ಕವಿ ಕೆ.ಪಿ. ತಾರೇಶ್ ಕಾರ್ಯಕ್ರಮ ನಿರೂಪಿಸಿದರು. ಎನ್. ಪುಟ್ಟಾನಾಯ್ಕ ಪ್ರಾಸ್ತಾವಿಕವಾಗಿ ಮಾತನಾಡಿದರು.

## ಧನ್ಯಶ್ರೀ, ಮಾನ್ಯಶ್ರೀ ಸೋದರಿಯರಿಗೆ ಭಗವದ್ಗೀತೆ ಸ್ಪರ್ಧೆಯಲ್ಲಿ ಬಂಗಾರದ ಪದಕ



ದಾವಣಗೆರೆ, ಜೂ.12- ನಗರದ ಶಿವ ಪಾರ್ವತಿ ಬಡಾವಣೆಯ ಮಾಲತೇಶ್ ನಾಡಿಗೇರ್ ಮತ್ತು ಬಿ.ಆರ್. ರಾಗಿಣಿ ದಂಪತಿ ಪುತ್ರಿಯರಾದ ಧನ್ಯಶ್ರೀ ಹಾಗೂ ಮಾನ್ಯಶ್ರೀ ಸಹೋದರಿಯರು ಮೈಸೂರಿನ ಗಣಪತಿ ಸಚ್ಚಿದಾನಂದ ಆಶ್ರಮದ ಆಶ್ರಯದಲ್ಲಿ ಕಳೆದ ವಾರ ನಡೆದ ಅಖಿಲ ಭಾರತ ಮಟ್ಟದ ಭಗವದ್ಗೀತೆ ಸ್ಪರ್ಧೆಯಲ್ಲಿ ಬಂಗಾರದ ಪದಕ ಪಡೆದಿದ್ದಾರೆ. ಪದಕವನ್ನು ಸಚ್ಚಿದಾನಂದ ಅವಧೂತರು ನೀಡಿ, ಆಶೀರ್ವದಿಸಿದರು. ಧನ್ಯಶ್ರೀ ಮತ್ತು ಮಾನ್ಯಶ್ರೀ ಸಹೋದರಿಯರನ್ನು ಹಿರಿಯ ಪತ್ರಕರ್ತ ತಾರಾನಾಥ್ ಮತ್ತು ಸಾಮಾಜಿಕ ಸೇವಾ ಕಾರ್ಯಕರ್ತ ಎಂ.ಜಿ. ಶ್ರೀಕಾಂತ್ ಅಭಿನಂದಿಸಿದ್ದಾರೆ.

## ಸಿದ್ಧರಾಮೇಶ್ವರರ ವಚನ ಗಾಯನ



ದಾವಣಗೆರೆ, ಜೂ.12- ಧಾರವಾಡದ ಮನಗುಂದಿಯ ಶ್ರೀ ಬಸವಾನಂದ ಸ್ವಾಮಿಗಳ ಬಸವ ಮಹಾಮನೆಯಲ್ಲಿ ನಡೆದ ಧಾರ್ಮಿಕ ಕಾರ್ಯಕ್ರಮದಲ್ಲಿ ನಗರದ ಚಿತ್ರಿಕಿ ಶಿವಕುಮಾರ್ ಅವರು ಶಿವಯೋಗಿ ಸಿದ್ಧರಾಮೇಶ್ವರರ ವಚನ ಹಾಡಿದರು.

## ನಗರದ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ನಾಳೆ ಕಾರ ಹುಣ್ಣಿಮೆ



ದಾವಣಗೆರೆ, ಜೂ. 12 - ನಗರದ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಹುಣ್ಣಿಮೆ ದಿನವಾದ ನಾಡಿದ್ದು ದಿನಾಂಕ 14 ರ ಮಂಗಳವಾರ ನವಗ್ರಹ ಹೋಮ, ಶ್ರೀ ಸತ್ಯನಾರಾಯಣ ಸ್ವಾಮಿ ಪೂಜಾ ಕಥಾ, ಪ್ರಧಾನ ದೇವತೆ ಶ್ರೀ ಮಾತಾ ಅನ್ನಪೂರ್ಣೇಶ್ವರಿಗೆ ಮಹಾಮಂಗಳಾರತಿ ಮತ್ತು ಪ್ರಸಾದ ವಿನಿಯೋಗ ನಡೆಯಲಿದೆ. ಶ್ರೀಮತಿ ನಂದಿನಿ ಮತ್ತು ಪ್ರಶಾಂತ್ ಕುಟುಂಬದವರು ಪೂಜಾ ಸೇವಾಕರ್ತರಾಗಿದ್ದಾರೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ.

## ಆಟೋ ಚಾಲಕರಿಂದ ಮಾಮೂಲಿ ವಸೂಲಿ: ಐಜಿಪಿಗೆ ದೂರು

ದಾವಣಗೆರೆ, ಜೂ.12- ಆಟೋ ಚಾಲಕರಿಂದ ಮಾಮೂಲಿ ವಸೂಲು ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಎಸ್ಪಿಗೆ ಆಧಾರ ಸಹಿತ ದೂರು ನೀಡಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಕರ್ನಾಟಕ ರಕ್ಷಣಾ ಸಮಿತಿ ಪಕ್ಷದ ದಾವಣಗೆರೆ ಯುವ ಘಟಕದ ಜಿಲ್ಲಾಧ್ಯಕ್ಷ ಡಿ.ಜಿ. ಮಾಲತೇಶ್ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದ್ದಾರೆ.

ಪೇದೆ ಚಂದ್ರನಾಯ್ಕ ಅವರು ಪ್ರತಿ ಆಟೋಕ್ಕೆ 400 ರೂ. ಗಳಂತೆ 10 ಆಟೋಗಳಿಂದ ಆಟೋ ಚಾಲಕರ ಪರವಾಗಿ ರಮೇಶ್ ಎಂಬುವರಿಂದ 4 ಸಾವಿರ ರೂ.ಗಳನ್ನು ಫೋನ್ ಪೇ ಮೂಲಕ ಪಡೆದಿದ್ದಾರೆ. ಇದೇ ವಿಚಾರಕ್ಕೆ ಬಸವರಾಜ ಎಂಬುವರು ನನ್ನ ಮೇಲೆ ಹಲ್ಲೆ ನಡೆಸಿದ್ದಾರೆ. ತಿಂಗಳ ಮಾಮೂಲಿ ಪಡೆಯುವ ಪೊಲೀಸರು ದಂಡ ಕೂಡ ವಿಧಿಸುತ್ತಾರೆ. ಇದರಿಂದ ಆಟೋ ಚಾಲಕರಿಗೆ ಹೊರೆಯಾಗುತ್ತದೆ ಎಂದರು. ಈ ಕುರಿತು ನಾಳೆ ದಿನಾಂಕ 13 ರಂದು ಪೂರ್ವವಲಯ ಮಹಾನಿರೀಕ್ಷಕರಿಗೆ ಮನವಿ ಸಲ್ಲಿಸಲಾಗುವುದು. ಲಂಚ ಪ್ರಕರಣದ ದೂರು ನೀಡಲಾಗಿದ್ದು, ದೂರು ವಾಪಾಸ್ ಪಡೆಯುವಂತೆ ಪೊಲೀಸರು ಒತ್ತಡ ಹಾಕುತ್ತಿದ್ದಾರೆ ಎಂದು ದೂರಿದರು.

ಪತ್ರಿಕಾಗೋಷ್ಠಿಯಲ್ಲಿ ಆಟೋ ಚಾಲಕ ರಮೇಶ್, ಕೆಆರ್‌ಎಸ್ ಪಕ್ಷದ ಎಂ.ಎಸ್. ಅಭಿಷೇಕ್, ಎಂ.ಹೆಚ್. ರಾಜು, ಟಿ. ಅಜ್ಜೇಶ್, ಚಾಲಕ ಮಣಿಕಂಠ ಉಪಸ್ಥಿತರಿದ್ದರು.


## ನಾಳೆ ನೂತನ ಶಾಲಾ ಕಟ್ಟಡ ಹಸ್ತಾಂತರ

ದಾವಣಗೆರೆ, ಜೂ.12- ತಾಲ್ಲೂಕಿನ ಹಳೇ ಬಿಸಲೇರಿಯ ಶ್ರೀಮತಿ ಗೌರಮ್ಮ ಕುಂದೂರು ವೀರಭದ್ರಪ್ಪ ಟ್ರಸ್ಟ್ ಹಾಗೂ ಕುಂದೂರು ಕನ್‌ಸ್ಟ್ರಕ್ಷನ್ ಪ್ರೈವೇಟ್ ಲಿಮಿಟೆಡ್ (ಬೆಂಗಳೂರು) ಇವರ ವತಿಯಿಂದ ದಾನಿಗಳಾದ ಕುಂದೂರು ಮುರಿಗೆಪ್ಪ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ನೂತನ ಶಾಲಾ ಕಟ್ಟಡದ ಹಸ್ತಾಂತರ ಸಮಾರಂಭವು ನಾಡಿದ್ದು ದಿನಾಂಕ 14 ರ ಮಂಗಳವಾರ ಬೆಳಿಗ್ಗೆ 10.30 ಕ್ಕೆ ಹಳೇಬಿಸಲೇರಿಯಲ್ಲಿ ನಡೆಯಲಿದೆ.

ನೂತನ ಶಾಲಾ ಕಟ್ಟಡವನ್ನು ಸಚಿವ ಬಿ.ಸಿ. ನಾಗೇಶ್ ಉದ್ಘಾಟಿಸುವರು. ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಜಿ.ಎಂ. ಸಿದ್ದೇಶ್ವರ, ತೇಜಸ್ವಿ ಸೂರ್ಯ, ಎಸ್.ಎ. ರವೀಂದ್ರನಾಥ್, ಪ್ರೊ. ಕೆ. ಸಿದ್ದಪ್ಪ, ಬಿ.ಸಿ. ಉಮಾಪತಿ ಆಗಮಿಸುವರು.

ವಿಶೇಷ ಆಹ್ವಾನಿತರಾಗಿ ಮಹಂತೇಶ್ ಬೀಳಗಿ, ಸಿ.ಬಿ. ರಿಷ್ಯಂತ್, ಡಾ. ಎ. ಚೆನ್ನಪ್ಪ, ಜೆ.ಆರ್. ತಿಪ್ಪೇಶಪ್ಪ, ಎಚ್.ಕೆ. ಲಿಂಗರಾಜು, ಬಸವನಗೌಡ ಕೋಟೂರು, ಎನ್.ಜೆ. ಆನಂದ್, ಎಂ. ನಿರಂಜನಮೂರ್ತಿ, ಶ್ರೀಮತಿ ಪುಷ್ಪಲತಾ, ಕೆ.ಜಿ. ಶಿವಶಂಕರ್, ಚೌಡಪ್ಪ, ಎ.ಕೆ. ಆನಂದಪ್ಪ, ಶ್ರೀಮತಿ ಅಶ್ವಿನಿ, ಶ್ರೀಮತಿ ಚಂದ್ರಕಲಾ ಆಗಮಿಸುವರು.

## ಭದ್ರಾ ಕಾಲೇಜಿನಲ್ಲಿ ಭದ್ರಾ ಸಂಸ್ಕೃತಿ



ದಾವಣಗೆರೆ, ಜೂ. 12- ನಗರದ ಭದ್ರಾ ಪದವಿ ಕಾಲೇಜಿನಲ್ಲಿ ಭದ್ರಾ ಸಂಸ್ಕೃತಿ 2022 ಎತ್ನಿಕ್ ಡೇ ಆಚರಿಸಲಾಯಿತು. ವಿವಿಧತೆಯಲ್ಲಿ ಏಕತೆ ಸಾರುವ ಮೂಲಕ ಭಾರತ ಬಹು ಸಂಸ್ಕೃತಿಯ ದೇಶ ಎಂಬುದನ್ನು ಬಿಸಿಎ ಹಾಗೂ ಬಿ.ಕಾಂ. ವಿದ್ಯಾರ್ಥಿಗಳು ಎತ್ನಿಕ್ ಡೇ ಆಚರಿಸುವ ಮೂಲಕ ಸಾಬೀತು ಪಡಿಸಿದರು. ಭದ್ರಾ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಡಿ. ಚಂದ್ರಪ್ಪ, ಭದ್ರಾ ಪದವಿ ಕಾಲೇಜಿನ ಪ್ರಾಂಶುಪಾಲ ಟಿ. ಮುರುಗೇಶ್ ಕಾಲೇಜಿನ ಆವರಣದಲ್ಲಿ ಸಸಿ ನೆಡುವುದರ ಮೂಲಕ ವಿದ್ಯಾರ್ಥಿಗಳಿಗೆ ಪರಿಸರ ಪ್ರಜ್ಞೆ ಹಾಗೂ ಸಂಸ್ಕೃತಿಯ ಮಹತ್ವ ಮೂಡಿಸಿದರು.

## ಜಿಲ್ಲಾಧಿಕಾರಿ ಹಸುವಿಗೆ ಏಳು ಪಶು ವೈದ್ಯರು ಉತ್ತರ ಪ್ರದೇಶದಲ್ಲೊಂದು ವಿಚಿತ್ರ ಆದೇಶ

ಪ್ರಯಾಗ್‌ರಾಜ್, ಜೂ. 12 – ಉತ್ತರ ಪ್ರದೇಶದ ಫತೇಪುರದ ಜಿಲ್ಲಾಧಿಕಾರಿಯ ರೋಗಗ್ರಸ್ಥ ಹಸುವನ್ನು ದಿನಕ್ಕೊಬ್ಬರಂತೆ ಏಳು ಪಶುವೈದ್ಯರು ನೋಡಿಕೊಳ್ಳಬೇಕು ಎಂಬ ವಿಚಿತ್ರ ಆದೇಶವನ್ನು ಹೊರಡಿಸಲಾಗಿದೆ. ಕಳೆದ ಜೂನ್ 9ರಂದು ಆದೇಶ ಹೊರಡಿಸಲಾಗಿತ್ತಾದರೂ, ಮರು ದಿನವೇ ಆದೇಶ ವಾಪಸ್ ಪಡೆಯಲಾಗಿದೆ. ಆದರೆ, ಆದೇಶದ ಪ್ರತಿ ಭಾನುವಾರ ವೈರಲ್ ಆಗಿದೆ. ಹಸು ನೋಡಿಕೊಳ್ಳಲು ತಾವು ಯಾವುದೇ ಸೂಚನೆ ನೀಡಿರಲಿಲ್ಲ ಎಂದಿರುವ ಜಿಲ್ಲಾಧಿಕಾರಿ ಅಪೂರ್ವ ದುಬೆ, ತಮ್ಮ ವಿರುದ್ಧ ಸಂಚು ನಡೆಸಲಾಗಿದೆ ಎಂದಿದ್ದಾರೆ.

ಮುಖ್ಯ ಪಶು ವೈದ್ಯಾಧಿಕಾರಿ ಡಾ. ಎಸ್.ಕೆ. ತಿವಾರಿ ಅವರು ಹೊರಡಿಸಿದ್ದ ಆದೇಶದಲ್ಲಿ ಏಳು ಪಶು ವೈದ್ಯರನ್ನು ಹೆಸರಿಸಲಾಗಿತ್ತು. ಬೆಳಿಗ್ಗೆ ಹಾಗೂ ಸಂಜೆ ಹಸುವನ್ನು ನೋಡಿಕೊಳ್ಳುವಂತೆ ತಿಳಿಸಲಾಗಿತ್ತು. ಯಾರಾದರೂ ರಜೆ ಹಾಕಿದ ಸಂದರ್ಭದಲ್ಲಿ ದಮಾಪುರದ ವೈದ್ಯಾಧಿಕಾರಿ ಈ ಕೆಲಸ ನಿರ್ವಹಿಸಬೇಕು. ನಿರ್ಲಕ್ಷ್ಯವನ್ನು ಸಹಿಸುವುದಿಲ್ಲ ಎಂದು ತಿಳಿಸಲಾಗಿತ್ತು.

## ಮಹಿಳಾ ಸೇವಾ ಸಮಾಜ ಶಾಲೆಯಲ್ಲಿ ಪರಿಸರ ದಿನಾಚರಣೆ



ದಾವಣಗೆರೆ, ಜೂ. 12 - ನಗರದ ಮಹಿಳಾ ಸಮಾಜದ ಪ್ರೌಢಶಾಲೆಯಲ್ಲಿ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು. ಶಿಕ್ಷಕರು ಮಕ್ಕಳೊಂದಿಗೆ ಕೆ.ಟಿ.ಜೆ ನಗರ, ನಿಟುವಳ್ಳಿ ಮತ್ತು ಕೆ.ಬಿ. ಬಡಾವಣೆ ಮುಂತಾದ ಸ್ಥಳಗಳಲ್ಲಿ ಜಾಥಾ ನಡೆಸಿ ಸ್ಲೋಗನ್‌ಗಳನ್ನು ಪ್ರದರ್ಶಿಸಿ, ನಂತರ ಜಯದೇವ ಸರ್ಕಲ್‌ನಲ್ಲಿ ಕೊನೆಗೊಳಿಸಲಾಯಿತು. ನಂತರ ಶಾಲೆಯಲ್ಲಿ ಆಡಳಿತ ಮಂಡಳಿಯವರು ಸಸಿ ನೆಟ್ಟು ಮಕ್ಕಳಿಗೆ ಸಸಿಗಳನ್ನು ಪೋಷಿಸಲು ದತ್ತು ನೀಡಲಾಯಿತು.

## ಬಸವ ಬಳಗದ ಹಾಸ್ಟೆಲ್‌ಗೆ ಅರ್ಜಿ

ದಾವಣಗೆರೆ, ಜೂ.12- ಬಸವ ಬಳಗದ ಹಾಸ್ಟೆಲ್‌ಗೆ ವಿದ್ಯಾರ್ಥಿನಿಯರ ಪ್ರಸಾದ ನಿಲಯ (ಹಾಸ್ಟೆಲ್) ಪ್ರವೇಶ ಆರಂಭವಾಗಿದೆ. ವಿವರಕ್ಕೆ ಸಂಪರ್ಕಿಸಿ. 73377 37884, 98805 55916

## ಜಿಲ್ಲಾ ಬಿಜೆಪಿ ರೈತ ಮೋರ್ಚಾದಿಂದ ಪ್ರಧಾನಿ ಮೋದಿಯವರ ವಿವಿಧ ಯೋಜನೆಗಳ ಪ್ರಚಾರ



ದಾವಣಗೆರೆ, ಜೂ.12- ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ದೇಶದ ರೈತರಿಗಾಗಿ ಜಾರಿಗೊಳಿಸಿರುವ ವಿವಿಧ ಯೋಜನೆಗಳ ಫಲಾನುಭವಿಗಳಿಗೆ ನೇರವಾಗಿ ಖಾತೆಗೆ ಹಣ ಜಮಾ ಆಗುವುದು, ರಸಗೊಬ್ಬರ ಸಬ್ಸಿಡಿ ಸಿಗುವುದು, ರೈತರಿಗೆ ಬೆಂಬಲ ಬೆಲೆ ಸಿಗುವುದು, ಉಜ್ವಲ್ ಯೋಜನೆಯಲ್ಲಿ ಗ್ಯಾಸ್ ವಿತರಣೆ ಮಾಡಿರುವುದು, ವಿವಿಧ ಕ್ಷೇತ್ರಗಳಲ್ಲಿ ರೈತರಿಗೆ ಆರ್ಥಿಕ ಮತ್ತು ಬ್ಯಾಂಕ್‌ಗಳ ಉದ್ದೇಶಗಳು, ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ, ಗಿಡ ನೆಡುವ ಕಾರ್ಯಕ್ರಮ ನಡೆಸಲಾಯಿತು. ಜಿಲ್ಲಾ ರೈತ ಮೋರ್ಚಾ ಅಧ್ಯಕ್ಷ ಲೋಕಿಕೆರೆ ನಾಗರಾಜ್, ಜಿಲ್ಲಾ ಕಾರ್ಯದರ್ಶಿ ಬಾತಿ ಶಿವಕುಮಾರ್, ಬಿ.ಕೆ. ಉತ್ತರ ಮಂಡಲದ ಉಪಾಧ್ಯಕ್ಷ ಸಿದ್ದೇಶ್ ಹಳೇಬಾತಿ, ಗ್ರಾಮ ಬಿಜೆಪಿ ಸದಸ್ಯ ಎನ್. ಜಯಪ್ಪ, ಅಂಗಡಿ ಪರಸಪ್ಪ, ಮಲ್ಲಿಕಾರ್ಜುನಪ್ಪ, ಶಿವಾನಂದಪ್ಪ, ಮಂಜುನಾಥಯ್ಯ ಮತ್ತು ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ನೋಟೀಸ್ ನೀಡದೆ ವಾಹನ ಸೀಜ್ : ಇಂದು ರೈತ ಸಂಘದ ಪ್ರತಿಭಟನೆ

ದಾವಣಗೆರೆ, ಜೂ. 12- ಸಾಲದ ಕಂತು ಪಾವತಿಸಿಲ್ಲ ಎಂಬ ನೆಪದಲ್ಲಿ ಮಾಲೀಕರ ಗಮನಕ್ಕೂ ತರದೇ ಪ್ಯಾಸೆಂಜರ್ ಆಟೋ ಹರಾಜು ಮಾಡಿರುವುದನ್ನು ವಿರೋಧಿಸಿ ನಾಳೆ ದಿನಾಂಕ 13 ರ ಸೋಮವಾರ ಖಾಸಗಿ ಹಣಕಾಸು ಸಂಸ್ಥೆ ಮುಂದೆ ಪ್ರತಿಭಟನೆ ನಡೆಸಲಾಗುವುದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬುಳ್ಳಾಪುರದ ಹನುಮಂತಪ್ಪ ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹೊಸ ಬುಳ್ಳಾಪುರ ಗ್ರಾಮದ ಅರುಣ್ ಕುಮಾರ್ ಎಂಬಾತ ಖಾಸಗಿ ಹಣಕಾಸು ಸಂಸ್ಥೆಯಲ್ಲಿ 2014 ರಲ್ಲಿ 1 ಲಕ್ಷದ 13 ಸಾವಿರ ರೂ. ಸಾಲ ಪಡೆದಿದ್ದು, ಪ್ರತಿ ತಿಂಗಳು 4380 ರೂ. ನಂತೆ 13 ಕಂತುಗಳನ್ನು ಪಾವತಿ ಮಾಡಿದ್ದಾರೆ. ನಂತರದ ದಿನಗಳಲ್ಲಿ ವಾಹನ ದುರಸ್ತಿಗೆ ಬಂದು ವ್ಯವಹಾರದಲ್ಲಿ ನಷ್ಟ ಉಂಟಾಗಿದೆ. ಕಂತು ಪಾವತಿ ಮಾಡಲು ಸಾಧ್ಯವಾಗಿಲ್ಲ. 2015 ರಲ್ಲಿ ಫೈನಾನ್ಸ್ ಕಂಪನಿಯವರು ವಾಹನವನ್ನು ಸೀಜ್ ಮಾಡಿದ್ದಾರೆ. ಅಲ್ಲದೇ ಮಾಲೀಕನಿಗೂ ತಿಳಿಸದೇ, ನೋಟೀಸ್ ನೀಡದೇ ವಾಹನ ಹರಾಜು ಮಾಡಿದ್ದಾರೆ ಎಂದು ದೂರಿದರು.

ಸುದ್ದಿಗೋಷ್ಠಿಯಲ್ಲಿ ಬುಳ್ಳಾಪುರದ ಪರಮೇಶ್ವರಪ್ಪ, ಕರಿಲಕ್ಕೇನಹಳ್ಳಿ ಹನುಮಂತಪ್ಪ, ಶ್ರೀನಿವಾಸ್, ರಂಗಸ್ವಾಮಿ, ಎ.ಆರ್. ಕರಿಬಸಪ್ಪ ಉಪಸ್ಥಿತರಿದ್ದರು.

## ನಾಳೆ ಜಿಲ್ಲಾ ಕಾಂಗ್ರೆಸ್‌ನಿಂದ ನವ ಸಂಕಲ್ಪ ಚಿಂತನಾ ಶಿಬಿರ

ದಾವಣಗೆರೆ, ಜೂ.12- ಎಐಸಿಸಿ ಹಾಗೂ ಕೆಪಿಸಿಸಿ ನಿರ್ದೇಶನದಂತೆ ಇದೇ 14ರಂದು ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ನವ ಸಂಕಲ್ಪ ಚಿಂತನಾ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ಪಕ್ಷದ ಜಿಲ್ಲಾಧ್ಯಕ್ಷ ಹೆಚ್. ಬಿ. ಮಂಜಪ್ಪ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದ ಎಂ.ಬಿ.ಎ. ಕಾಲೇಜು ಸಭಾಂಗಣದಲ್ಲಿ ಬೆಳಿಗ್ಗೆ 9.30 ಗಂಟೆಗೆ ನಡೆಯಲಿರುವ ಕಾರ್ಯಕ್ರಮವನ್ನು ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಉದ್ಘಾಟಿಸಲಿದ್ದಾರೆ.

ಕೆಪಿಸಿಸಿ ಉಪಾಧ್ಯಕ್ಷರೂ, ಜಿಲ್ಲೆಯ ವೀಕ್ಷಕರೂ ಆದ ಎಂ.ಸಿ. ವೇಣುಗೋಪಾಲ್, ಮಾಜಿ ರಾಜ್ಯಸಭಾ ಸದಸ್ಯ ಎಲ್.ಹನುಮಂತಪ್ಪ, ಮಾಜಿ ಸ್ಪೀಕರ್ ಬಿ.ಎಲ್. ಶಂಕರ್, ಕೆಪಿಸಿಸಿ ವಕ್ತಾರ ನಿಕೇತ್ ರಾಜ್ ಮೌರ್ಯ, ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಶಾಸಕ ಎಸ್.ರಾಮಪ್ಪ, ಅಬ್ದುಲ್ ಜಬ್ಬಾರ್ ಇತರರು ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಪಕ್ಷವನ್ನು ತಳಮಟ್ಟದಲ್ಲಿ ಸಂಘಟಿಸುವುದು, ಪಕ್ಷದ ಕಾರ್ಯಗಳನ್ನು ಜನತೆಗೆ ತಿಳಿಸುವುದು. ಆಡಳಿತ ಪಕ್ಷದ ಜನ ವಿರೋಧಿ ನೀತಿಗಳ ಕುರಿತು ಹೋರಾಟ ನಡೆಸುವುದು, ಜಿಲ್ಲೆಯ ಸಮಸ್ಯೆಗಳ ಕುರಿತು ಸಭೆಯಲ್ಲಿ ಚರ್ಚೆ ನಡೆಯಲಿದೆ. ಇಲ್ಲಿನ ಅಭಿಪ್ರಾಯ ಸಂಗ್ರಹಿಸಿ, ರಾಜ್ಯಾಧ್ಯಕ್ಷರಿಗೆ ಸಲ್ಲಿಸಲಾಗುವುದು ಎಂದರು.

ಮುಂಬರುವ ವಿಧಾನಸಭಾ ಚುನಾವಣೆಗೆ ಹೊನ್ನಾಳಿ ಕ್ಷೇತ್ರದಿಂದ ತಾವೂ ಸಹ ಆಕಾಂಕ್ಷಿಯಾಗಿದ್ದು, ವರಿಷ್ಠರ ತೀರ್ಮಾನಕ್ಕೆ ಬದ್ಧರಿರುವುದಾಗಿ ಇದೇ ವೇಳೆ ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಅಭಿವೃದ್ಧಿ ಹೆಸರಿನಲ್ಲಿ ಬಿಜೆಪಿ ಲೂಟಿ ಮಾಡುತ್ತಿದೆ ಎಂದು ಆರೋಪಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಹಾನಗರ ಪಾಲಿಕೆ ವಿರೋಧ ಪಕ್ಷದ ನಾಯಕ ಮಂಜುನಾಥ ಗಡಿಗುಡಾಳ್, ಸದಸ್ಯ ಎ. ನಾಗರಾಜ್, ಮುಖಂಡರುಗಳಾದ ನಂಜಾನಾಯ್ಕ, ಅನಿತಾಬಾಯಿ ಮಾಲತೇಶ್ ಜಾಧವ್, ಲಿಯಾಖತ್ ಅಲಿ, ಜಬ್ಬಾರ್, ಹರೀಶ್ ಬಸಾಪುರ, ರಾಜಾಭಕ್ಷಿ ಇತರರು ಉಪಸ್ಥಿತರಿದ್ದರು.

ಹಾರ್ದಿಕ ಸುಸ್ವಾಗತ

ಶ್ರೀಮತಿ ಗೌರಮ್ಮ ಕುಂದೂರು ವೀರಭದ್ರಪ್ಪ ಟ್ರಸ್ಟ್ (ರಿ).,
ಹಾಗೂ ಕುಂದೂರು ಕನ್‌ಸ್ಟ್ರಕ್ಷನ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು
ಇವರಿಗೆ ಹೃತ್ಪೂರ್ವಕ ಕೃತಜ್ಞತೆಗಳು.
ದಾವಣಗೆರೆ ಜಿಲ್ಲೆ ಹಳೇ ಬಿಸಲೇರಿ ಗ್ರಾಮದಲ್ಲಿ
ದಾನಿಗಳು ನಿರ್ಮಿಸಿರುವ
**ಕುಂದೂರು ಮುರಿಗೆಪ್ಪ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ**
ನೂತನ ಶಾಲಾ ಕಟ್ಟಡದ ಹಸ್ತಾಂತರ ಸಮಾರಂಭ ದಿನಾಂಕ : 14.06.2022ರ
ಮಂಗಳವಾರ ನಡೆಯಲಿದ್ದು, ಈ ಸಮಾರಂಭಕ್ಕೆ ಆಗಮಿಸುತ್ತಿರುವ
ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರಾದ
**ಶ್ರೀ ಬಿ.ಸಿ. ನಾಗೇಶ್** ಅವರಿಗೂ
ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಹಾಲಿ ಶಾಸಕರು, ಮಾಜಿ ಸಚಿವರಾದ,
**ಡಾ. ಶಾಮನೂರು ಶಿವಶಂಕರಪ್ಪ** ಅವರಿಗೂ
ಮುಖ್ಯ ಅತಿಥಿಗಳಾಗಿ ಆಗಮಿಸುತ್ತಿರುವ
ದಾವಣಗೆರೆ ಲೋಕಸಭಾ ಸದಸ್ಯರು, ಕೇಂದ್ರದ ಮಾಜಿ ಸಚಿವರಾದ
**ಶ್ರೀ ಜಿ.ಎಂ. ಸಿದ್ದೇಶ್ವರ** ಅವರಿಗೂ
ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಸಂಸದರಾದ
**ಶ್ರೀ ತೇಜಸ್ವಿ ಸೂರ್ಯ** ಅವರಿಗೂ
ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಶಾಸಕರು,
ಮಾಜಿ ಸಚಿವರಾದ
**ಶ್ರೀ ಎಸ್.ಎ. ರವೀಂದ್ರನಾಥ್** ಅವರಿಗೂ
ದಾವಣಗೆರೆ ಜಿಲ್ಲಾಧಿಕಾರಿಗಳಾದ
**ಶ್ರೀ ಮಹಾಂತೇಶ್ ಬೀಳಗಿ** ಅವರಿಗೂ
ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ
**ಶ್ರೀ ಸಿ.ಬಿ. ರಿಷ್ಯಂತ್** ಅವರಿಗೂ
ಹಾಗೂ ಸಮಾರಂಭಕ್ಕೆ ಆಗಮಿಸುತ್ತಿರುವ ಗಣ್ಯರಿಗೂ, ಅಧಿಕಾರಿಗಳಿಗೂ,
ಮುಖಂಡರುಗಳಿಗೂ, ಹಳೇ ಬಿಸಲೇರಿ ಗ್ರಾಮಸ್ಥರಿಗೂ ಹಾರ್ದಿಕ ಸುಸ್ವಾಗತ

ಪ್ರೊ. ಬಿ.ಕೆ. ಗಣೇಶ ಬಿಸಲೇರಿ
**ಅನ್ನಪೂರ್ಣೇಶ್ವರಿ ಊಟ ಮತ್ತು ಉಪಹಾರ ಮಂದಿರ**
# 2994/3A, 7ನೇ ಮೇನ್, 4ನೇ ಕ್ರಾಸ್, ಸ್ವಿಮ್ಮಿಂಗ್ ಪೂಲ್ ಹತ್ತಿರ,
ಎಂ.ಸಿ.ಸಿ.'ಬಿ' ಬ್ಲಾಕ್, ದಾವಣಗೆರೆ.
ಮೊ: 88847 46258, 96206 55669


ಅಭಿನಂದನೆಗಳು



ಜೈನ್ ಸಮಾಜ ರಾಜ್ಯಾದ್ಯಂತ ನಡೆಸಿದ
ಕರ್ಮ ಸಿದ್ಧಾಂತದ ಆಧಾರದ ಮೇಲಿನ ಸ್ಪರ್ಧೆಯಲ್ಲಿ
**ಚಿ|| ಪ್ರಣವ. ಸಿ. ಹಿರೇಮಠ**
ಬಾಪೂಜಿ ಪಾಲಿಟೆಕ್ನಿಕ್ ಕಾಲೇಜಿನ ಅಂತಿಮ ವರ್ಷದ ಡಿಪ್ಲೋಮಾ (C.S & E) ವಿದ್ಯಾರ್ಥಿ
ಪ್ರಥಮ ಸ್ಥಾನ ಗಳಿಸಿದ್ದು, ರೂ. 51,000/- ಮತ್ತು ಸ್ಮರಣಿಕೆ
ತನ್ನದಾಗಿಸಿಕೊಂಡಿದ್ದಾನೆ. ಇವನ ಯಶೋ ಮಾರ್ಗ ಹೀಗೇ
ಮುಂದುವರೆಯಲೆಂದು ಆಶೀರ್ವದಿಸುವ
ಗುರುದ್ವಯರಾದ :
ಆಚಾರ್ಯ ದೇವ ಶ್ರೀಮದ್ ಅಭಯ ಶೇಖರ್ ಸೂರೀಜಿ,
ಆಚಾರ್ಯ ದೇವ ಶ್ರೀಮದ್ ಅಜಿತ್ ಶೇಖರ್ ಸೂರೀಜಿ
ಸುಪಾರ್ಶ್ವನಾಥ್ ಜೈನ ಮಂದಿರ, ಚೌಕಿಪೇಟೆ, ದಾವಣಗೆರೆ.
ಶುಭ ಕೋರುವವರು:
ಶ್ರೀ ಶ್ರೇಣಿಕ್ ಪರ್ಮಾರ್, ಶ್ರೀ ಭೀಮರಾಜು ಹೆಚ್.ಪಿ.,
ಶ್ರೀಮತಿ ಅನುರಾಧ ಹೆಚ್.ಬಿ. , ಶ್ರೀಮತಿ ರುಕ್ಮಿಣಿ ಬಾಯಿ,
ಶ್ರೀ ವಿಜಯೇಂದ್ರ ಬಿಳ್ಳೂರ್, ಶ್ರೀ ಶ್ರೀನಿವಾಸ್ ಪಾಟೀಲ್
ತಂದೆ: ಸಿ.ಎಂ. ಹಿರೇಮಠ, ತಾಯಿ: ಶ್ರೀಮತಿ ಮೀನಾಕ್ಷಿ ಹಿರೇಮಠ
ಮತ್ತು ಬಂಧು-ಮಿತ್ರರು

**New - Lyf**

M.B.B.S. STUDY ABROAD




ಡೊನೇಷನ್ ಇಲ್ಲದೆ ಕಡಿಮೆ ಶುಲ್ಕದಲ್ಲಿ ವಿದೇಶದಲ್ಲಿ
MBBS ವಿದ್ಯಾಭ್ಯಾಸ ಮಾಡಲು ದಾವಣಗೆರೆಯಲ್ಲಿ

**ನ್ಯೂಲೈಫ್ ಸಂಸ್ಥೆ ಪ್ರಾರಂಭವಾಗಿದೆ**

**(Spot MBBS Admission-2022-23)**

ನಡೆಯುತ್ತಿದೆ. ತಕ್ಷಣ ಸಂಪರ್ಕಿಸಿ :
ವಿದ್ಯಾರ್ಥಿ ಭವನ ಸರ್ಕಲ್, ದಾವಣಗೆರೆ.

**ಫೋ. : 89714 63581, 81055 03664**



## ಭಾವಪೂರ್ಣ ಶ್ರದ್ಧಾಂಜಲಿ



ಶ್ರೀ ವಾಸವಿ ಚಾರಿಟೇಬಲ್ ಫೌಂಡೇಷನ್ ಟ್ರಸ್ಟಿಗಳು, ರಾಜನಹಳ್ಳಿ ಶಿವರಾಮಪ್ಪ ಸಹೋದರರ ಸಂಘದ ಅಧ್ಯಕ್ಷರು, ಲಯನ್ಸ್ ಕ್ಲಬ್ ಕಟ್ಟಡದ ದಾನಿಗಳು, ನಮ್ಮೆಲ್ಲರ ಆತ್ಮೀಯರು ಆಗಿದ್ದ **ಶ್ರೀ ಆರ್.ಎಸ್.ನಾಗರಾಜಶೆಟ್ಟಿ** ಅವರು ದಿನಾಂಕ 12-06-2022ರ ಭಾನುವಾರ ನಿಧನರಾಗಿದ್ದು, ಅವರಿಗೆ ನಮ್ಮೆಲ್ಲರ **ಭಾವಪೂರ್ಣ ಶ್ರದ್ಧಾಂಜಲಿಗಳು.** ಭಗವಂತನು ಅವರ ಆತ್ಮಕ್ಕೆ ಚಿರಶಾಂತಿಯನ್ನು ಹಾಗು ಅವರ ಕುಟುಂಬ ವರ್ಗಕ್ಕೆ ಅಗಲಿಕೆಯ ದುಃಖಭರಿಸುವ ಶಕ್ತಿ ನೀಡಲೆಂದು ಪ್ರಾರ್ಥಿಸುತ್ತೇವೆ.

ಅಧ್ಯಕ್ಷರು , ಕಾರ್ಯದರ್ಶಿ ಹಾಗು ಟ್ರಸ್ಟಿಗಳು

**ಶ್ರೀ ವಾಸವಿ ಚಾರಿಟೇಬಲ್ ಫೌಂಡೇಷನ್ (ರಿ.), ದಾವಣಗೆರೆ.**



# 24ನೇ ವರ್ಷದ ಪುಣ್ಯಸ್ಮರಣೆ



## ದಿ॥ ಬೇತೂರು ಶಾಂತಪ್ಪನವರು

ಜನನ : 26-08-1928 ಮರಣ : 13-06-1998

ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಎಂಬ ಕಲ್ಪನೆಯೊಂದಿಗೆ ಕಾಯಕವೇ ಕೈಲಾಸವೆಂಬ ತತ್ವದೊಂದಿಗೆ ನಮ್ಮ ಮನೆ-ಮನಗಳಲ್ಲಿ ದೀಪ ಮುಡಿಸಿ, ಶಿಸ್ತು-ಸಂಸ್ಕೃತಿ-ಸಂಸ್ಕಾರ ಕಲಿಸಿದ್ದೀರಿ. ನಮಗೆ ನೀಡಿದ ಮಮಕಾರ, ಪ್ರೀತಿ-ವಾತ್ಸಲ್ಯಕ್ಕಾಗಿ ನಾವು ಸದಾ ಚಿರಋಣಿ

ಇವರು ನಮ್ಮನ್ನಗಲಿ ಇಂದಿಗೆ ಇಪ್ಪತ್ತನಾಲ್ಕು ವರ್ಷಗಳಾದವು
ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಬೇಡುವ

ಧರ್ಮಪತ್ನಿ ಶ್ರೀಮತಿ ಸರಸ್ವತಮ್ಮ ಶಾಂತಪ್ಪ ಬೇತೂರು,
ಮಕ್ಕಳು, ಮೊಮ್ಮಕ್ಕಳು ಮತ್ತು ಮರಿಮೊಮ್ಮಕ್ಕಳು

ಹೆಚ್. ಆರ್. ಬೇತೂರ್, ವಿಜಯಲಕ್ಷ್ಮಿ ರಸ್ತೆ, ಹೆಚ್. ಆರ್. ಬೇತೂರ್ ಟ್ರೇಡರ್ಸ್, ಮಂಡಿಪೇಟೆ
ಬೇತೂರ್ ಕಮ್ಯೂನಿಕೇಷನ್ಸ್, ಪಿ.ಜೆ. ಬಡಾವಣೆ, ಬೇತೂರ್ ಎಂಟರ್‌ಪ್ರೈಸಸ್, ನಿಜಲಿಂಗಪ್ಪ ಬಡಾವಣೆ,
ಬೇತೂರ್ ಕುಟುಂಬವರ್ಗ ಹಾಗೂ ಬಂಧು-ಮಿತ್ರರು



HYUNDAI

**Festivities continue at Hyundai**

Open your world to your favourite Hyundai as you enjoy festive benefits



Downpayment Starts at **29,000***

| Santro | Nios | Aura | Xcent Prime |
|---|---|---|---|
| Savings upto 28,000* | Savings upto 48,000* | Savings upto 48,000* | Savings upto 50,000* |

## K J HYUNDAI

**Head Office:** # 371/271, P.B.Road, Avaragere, Davanagere-577 003. Ph: 70220 42241, 78999 33674

**Branch:** Opp to S.J.M.I.T. College, NH-4, P.B.Road, Chitradurga-577 501. Ph: 99807 59983

**Branch:** NH-13, Holalkere Road, Channagiri-577 213 Ph: 08189-298009, 70224 25985



# ಸುವರ್ಣ ಕರ್ನಾಟಕ ಹಿತ ರಕ್ಷಣಾ ವೇದಿಕೆ (ರಿ)

ಪ್ರಧಾನ ಕಛೇರಿ : ಫ್ರೇಜರ್ ಟೌನ್, ರಾಬರ್ಟ್‌ಸನ್ ರೋಡ್, ಬೆಂಗಳೂರು,
ಶಾಖಾ ಕಛೇರಿ: ಕೆ.ಇ.ಬಿ. ಸರ್ಕಲ್, ಮುಸ್ಲಿಂ ಹಾಸ್ಟೆಲ್ ಕಾಂಪ್ಲೆಕ್ಸ್, ದಾವಣಗೆರೆ




ಜನಪ್ರಿಯ, ಕೊಡುಗೈ ದಾನಿ
ಸಂಸ್ಥಾಪಕ ರಾಜ್ಯಾಧ್ಯಕ್ಷರಾದ
ಟಾರ್ಗೆಟ್ ಅಸ್ಲಂರವರಿಗೆ
ಹುಟ್ಟುಹಬ್ಬದ ಶುಭಾಶಯಗಳು

**ಟಾರ್ಗೆಟ್ ಅಸ್ಲಂ**
ಸಂಸ್ಥಾಪಕ ರಾಜ್ಯಾಧ್ಯಕ್ಷರು



ಶ್ರೀ ವಿಶ್ವನಾಥ ವಿ. ಕಟ್ಟಿ
ಗೌರವ ಅಧ್ಯಕ್ಷರು ಸು.ಕ.ರ.ವೇ ಹಾಗೂ
M.D Guardwell Securitas - B'lore

ದಿನಾಂಕ : 13 ಜೂನ್ 2022





-: ಶುಭಕೋರುವವರು :-



**ಸುವರ್ಣ ಕರ್ನಾಟಕ ಹಿತ ರಕ್ಷಣಾ ವೇದಿಕೆ (ರಿ)**




JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte